ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 31 | ಆಗಸ್ಟ್ 2, 1981 | ಬೆಲೆ : 60 ಪೈಸೆ

ಮುಷ್ಕರ ನಿಷಿದ್ಧ

ಅಗತ್ಯ ಸೇವೆಗಳಲ್ಲಿ ಮುಷ್ಕರ ನಿಷೇಧ ಹಾಗೂ ಅಕ್ರಮ ಮುಷ್ಕರಗಳಲ್ಲಿ ಪಾಲುಗೊಳ್ಳುವವರಿಗೆ ಉಗ್ರದಂಡನೆ ವಿಧಿಸುವುದಕ್ಕೆ ಅವಕಾಶ ನೀಡುವ ಅಮಿತ ಅಧಿಕಾರಗಳನ್ನು ರಾಷ್ಟ್ರಪತಿಯವರು ಇಂಗ್ಲೆಂಡಿನ ರಾಜಕುಮಾರ ಚಾರ್ಲ್ಸ್‌ನ ಮದುವೆಗೆ ಹೊರಡುವ ಮುನ್ನ ಹೊರಡಿಸಲಾದ ಸುಗ್ರೀವಾಜ್ಞೆಯ ಮೂಲಕ ಕೇಂದ್ರಸರಕಾರವು ಪಡೆದುಕೊಂಡಿದೆ. ಸಂಸತ್ತಿಗೆ ಶಾಸನ ಮಾಡಲು ಅಧಿಕಾರವಿರುವ ವಿಷಯಕ್ಕೆ ಸಂಬಂಧಿಸಿದ ಯಾವುದೇ ಸೇವೆಯನ್ನು "ಅಗತ್ಯ ಸೇವೆ" ಎಂದು ಘೋಷಿಸಲು ಸುಗ್ರೀವಾಜ್ಞೆ ಕೇಂದ್ರಕ್ಕೆ ಅಧಿಕಾರವನ್ನು ನೀಡುತ್ತದೆ. ಕಾರ್ಮಿಕವರ್ಗದ ಸಂಘಟನಾ ಹಕ್ಕು ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ನಗ್ನ ಆಕ್ರಮಣವು ಇದಾಗಿದೆ.

ದೇಶದಲ್ಲಿ ಬಂಡವಾಳಶಾಹಿ ಪದ್ಧತಿಯನ್ನು ಬೆಳೆಸಲು ಆಳುವ ವರ್ಗಗಳು ಸತತವಾಗಿ ಶ್ರಮಿಸುತ್ತಾ ಬಂದಿದ್ದು, ಜಗತ್ತಿನ ಬಂಡವಾಳಶಾಹಿ ವ್ಯವಸ್ಥೆಯು ಎದುರಿಸುತ್ತಿರುವ ಆಳವಾದ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಭಾರತ ದೇಶದಲ್ಲಿ ಅತ್ಯಂತ ತೀವ್ರವಾದ ಆರ್ಥಿಕ ಬಿಕ್ಕಟ್ಟು

ಸಂಪಾದಕೀಯ

ಬೆಳೆದುಬಂದಿದೆ. ಹಣದುಬ್ಬರ, ಬೆಲೆಏರಿಕೆಗಳು ಅತ್ಯಂತ ತೀವ್ರಗತಿಯಿಂದ ಬೆಳೆದುಬಂದಿವೆ. ಶ್ರಮಜೀವಿಗಳ ಮತ್ತು ಜನತೆಯ ಕೊಳ್ಳುವ ಶಕ್ತಿಯು ಕ್ರಮೇಣ ಕುಸಿಯುತ್ತಾ ಬಂದಿದ್ದು, ಆಂತರಿಕ ಮಾರುಕಟ್ಟೆಯು ವಿಸ್ತರಣೆಯಾಗುವುದಕ್ಕೆ ಬದಲು ಕ್ಷೀಣಿಸುತ್ತಾ ಬಂದಿದೆ. ಇದರಿಂದಾಗಿ ಔದ್ಯಮಿಕ ಬೆಳವಣಿಗೆಯಾಗುವುದಕ್ಕೆ ಬದಲು ಸ್ಥಗಿತಗೊಂಡಿದೆ. ಉದ್ಯೋಗಾವಕಾಶಗಳು ಹೆಚ್ಚುವ ಬದಲು ಕಡಿಮೆಯಾಗಿದೆ. ನಿರುದ್ಯೋಗ, ಬಡತನಗಳು ಇನ್ನೂ ಹೆಚ್ಚಿವೆ.

ಬೆಲೆಏರಿಕೆಯನ್ನು ತಡೆಗಟ್ಟುವ ಮತ್ತು ನಿರುದ್ಯೋಗ ಸಮಸ್ಯೆಗೆ ಪರಿಹಾರವನ್ನು ಕೊಡುವ ಆಶ್ವಾಸನೆಗಳೊಂದಿಗೆ ಮತ್ತೆ ಅಧಿಕಾರಕ್ಕೆ ಬಂದಿರುವ ಇಂದಿರಾ ಕಾಂಗ್ರೆಸ್ಸಿನ ಕಳೆದ ಒಂದೂವರೆ ವರ್ಷದ ಆಡಳಿತದಲ್ಲಿ ಈ ಸಮಸ್ಯೆಗಳು ಇನ್ನೂ ಉಲ್ಬಣಗೊಂಡಿವೆ. ಇಂದಿರಾ ಕಾಂಗ್ರೆಸ್ಸಿನ ಧೋರಣೆಗಳು ಬೆಲೆಏರಿಕೆ, ನಿರುದ್ಯೋಗದಂತಹ ಸಮಸ್ಯೆಗಳನ್ನು ಇನ್ನೂ ಹೆಚ್ಚಿಸುವುದಕ್ಕೆ ಸಹಾಯಕವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಕೊಳ್ಳುವಶಕ್ತಿಯು ಕ್ಷೀಣಿಸುತ್ತಿರುವಾಗ ಹೆಚ್ಚಿಗೆ ವೇತನಕ್ಕಾಗಿ ಕಾರ್ಮಿಕವರ್ಗ, ಅದರಲ್ಲೂ ಸಂಘಟಿತ ಕಾರ್ಮಿಕವರ್ಗ ಹೋರಾಡುವುದು ಸ್ವಾಭಾವಿಕ ಮತ್ತು ಅವಶ್ಯಕ. ಶ್ರಮಜೀವಿಗಳಿಗೆ ಹೆಚ್ಚಿಗೆ ದೊರೆತರೆ, ಅವರ ಕೊಳ್ಳುವ ಶಕ್ತಿಯು ಹೆಚ್ಚಿ ಆಂತರಿಕ ಮಾರುಕಟ್ಟೆಯೂ ವಿಸ್ತರಣೆಯಾಗುತ್ತದೆ. ಬಿಕ್ಕಟ್ಟಿನ ಭಾರವೂ ಕಡಿಮೆಯಾಗುತ್ತದೆ.

(ಕಡೇ ಪುಟ ನೋಡಿ)

ಕಾರ್ಮಿಕ ವರ್ಗದ ಮೇಲೆ ಗಧಾ ಪ್ರಹಾರ

ರಾಷ್ಟ್ರಪತಿಯವರ ಸುಗ್ರೀವಾಜ್ಞೆ

ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿಯವರು ಬ್ರಿಟನ್ನಿನ ರಾಜಕುಮಾರನ ಮದುವೆಗೆ ತೆರಳುವ ಮುನ್ನ ಭಾರತದ ಕಾರ್ಮಿಕವರ್ಗಕ್ಕೊಂದು ಉಡುಗೊರೆ ಕೊಟ್ಟಿದ್ದಾರೆ.

ಅಗತ್ಯಸೇವೆಗಳಲ್ಲಿ ಮುಷ್ಕರ ನಿಷೇಧ ಹಾಗೂ ಮುಷ್ಕರಗಳಲ್ಲಿ ಪಾಲ್ಗೊಳ್ಳುವವರಿಗೆ ಉಗ್ರದಂಡನೆ ವಿಧಿಸುವುದಕ್ಕೆ ಅವಕಾಶ ನೀಡುವ ಅಧಿಕಾರವನ್ನು ಕೇಂದ್ರಸರಕಾರ ಈ ಸುಗ್ರೀವಾಜ್ಞೆಯಿಂದ ಪಡೆದುಕೊಂಡಿದೆ. ರೈಲು, ಟೆಲಿಫೋನ್, ಬ್ಯಾಂಕ್, ಆಸ್ಪತ್ರೆ ಮುಂತಾದವುಗಳು ಅಗತ್ಯ ಸೇವೆಯ ವ್ಯಾಪ್ತಿಗೆ ಬರುವುದಲ್ಲದೇ ಸಂಸತ್ತಿಗೆ ಶಾಸನ ಮಾಡಲು ಅಧಿಕಾರವಿರುವ ವಿಷಯಕ್ಕೆ ಸಂಬಂಧಿಸಿದ ಯಾವುದೇ ಸೇವೆಯನ್ನು "ಅಗತ್ಯ ಸೇವೆ"ಯೆಂದು ಘೋಷಿಸಲು ಸಹ ಈ ಸುಗ್ರೀವಾಜ್ಞೆ ಕೇಂದ್ರಕ್ಕೆ ಅಧಿಕಾರ ನೀಡಿದೆ.

ಈ ಕರಾಳ ಸುಗ್ರೀವಾಜ್ಞೆ ಇಂದಿರಾ ಗಾಂಧಿಯವರ ನಿರಂಕುಶ ಪ್ರಭುತ್ವದ ಇನ್ನೊಂದು ಕುರುಹು. ಕಾರ್ಮಿಕರ ಮೂಲಭೂತ ಹಕ್ಕುಗಳಿಗೇ ಕುಠಾರಪ್ರಾಯವಾಗಿದೆ. ಗಗನಕ್ಕೇರಿರುವ ಬೆಲೆಗಳನ್ನು ಹಿಡಿತಕ್ಕೆ ತರಲು ಸಾಧ್ಯವಿಲ್ಲದ ಜನವಿರೋಧಿ ಸರಕಾರವು, ಲೇ-ಆಫ್, ವಿಕ್ಟಿಮೈಸೇಷನ್, ಕಾರ್ಖಾನೆ ಬಂದ್ ಆಗುವುದು (close) ಮುಂತಾದವುಗಳ ವಿರುದ್ಧ ಪ್ರತಿಭಟಿಸದೇ ಬಾಯ್ಮುಚ್ಚಿರಬೇಕೆಂದು ಈ ಸುಗ್ರೀವಾಜ್ಞೆಯನ್ನು ತಂದಿದೆ. ದೇಶದಾದ್ಯಂತ ಬೆಳೆಯುತ್ತಿರುವ ಕಾರ್ಮಿಕರ ಹೋರಾಟಗಳನ್ನು ತುಳಿಯಲು ಸರಕಾರ ಮುಂದಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ಈ ಕರಾಳ ಶಾಸನವನ್ನು ಉಗ್ರವಾಗಿ ಖಂಡಿಸಿದೆ. ದುಡಿಮೆಗಾರರ ಕೈ ಬಾಯಿ ಕಟ್ಟಿ ಅವರನ್ನು ಮಾಲೀಕರ ದಬ್ಬಾಳಿಕೆಯ ಯಜ್ಞಪಶು ಮಾಡುವ ತಂತ್ರ ಎಂದು ರಾಜ್ಯಸಮಿತಿ ಅಭಿಪ್ರಾಯಪಟ್ಟಿದೆ.

ದಿನಾಂಕ 27ರಂದು ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್. ನಂಬೂದಿರಿಪಾಡ್‌ರು ಸುಗ್ರೀವಾಜ್ಞೆ ಕುರಿತು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ "ಶ್ರಮಜೀವಿ ವರ್ಗದ ಮೇಲೆ ದಾಳಿ ನಡೆಸುವ ಈ ಪ್ರವೃತ್ತಿ ಜನತಂತ್ರ ಮೌಲ್ಯಗಳನ್ನೂ ಆವರಿಸೀತು" ಎಂದರು. ಅವರು ಮುಂದುವರೆದು

[ಕಡೇ ಪುಟ ನೋಡಿ]

ಇ. ಎಂ. ಎಸ್. ಅಭಿಮತ

ಜನಜೀವನ ಸುಧಾರಣೆ ಒಂದು ಪಕ್ಷದಿಂದ ಸಾಧ್ಯವಿಲ್ಲ

ದೇಶದ ಸಮಸ್ಯೆಗಳನ್ನು ಬಗೆಹರಿಸಿ ಜನರ ಜೀವನ ಉತ್ತಮಗೊಳಿಸಲು ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸಾಧ್ಯವಿಲ್ಲ ಎಂಬುದು ತಮ್ಮ ಪಕ್ಷದ ತಿಳುವಳಿಕೆಯಾಗಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನಕಾರ್ಯದರ್ಶಿ ಕಾಂ. ಇ. ಎಂ.ಎಸ್. ನಂಬೂದರಿಪಾದ್ ಅವರು ಹೇಳಿದ್ದಾರೆ.

ಜುಲೈ 26ರಂದು ಬೆಂಗಳೂರು ನಗರದ ಪುರಭವನದಲ್ಲಿ ಕಿಕ್ಕಿರಿದು ನೆರೆದಿದ್ದ ಸಾರ್ವಜನಿಕ ಸಭೆಯ ಸಭಿಕರನ್ನು ಉದ್ದೇಶಿಸಿ "ದೇಶದ ಪ್ರಸಕ್ತ ರಾಜಕೀಯ ಪರಿಸ್ಥಿತಿ" ಕುರಿತು ಕಾಂ. ಇ. ಎಂ. ಎಸ್. ಮಾತನಾಡುತ್ತಿದ್ದರು.

ದೇಶದಲ್ಲಿ ಇಂದು ತಾಂಡವವಾಡುತ್ತಿರುವ ಬಡತನ, ಬೆಲೆಏರಿಕೆ, ನಿರುದ್ಯೋಗ, ಹಣದುಬ್ಬರ, ಹರಿಜನರ ಮೇಲಿನ ದಬ್ಬಾಳಿಕೆ, ಅಲ್ಪಸಂಖ್ಯಾತರ ಅಭದ್ರತೆ ಮುಂತಾದ ಎಲ್ಲಾ ಸಮಸ್ಯೆಗಳಿಗೂ ಇದುವರೆಗೆ ದೇಶವನ್ನು ಆಳಿಕೊಂಡು ಬಂದ ಕಾಂಗ್ರೆಸ್ ಮತ್ತು ಜನತಾಪಕ್ಷಗಳು ಕಾರಣ ಎಂದು ತಮ್ಮ ಭಾಷಣದ ಆರಂಭದಲ್ಲೇ ಕಾಂ. ಇ. ಎಂ. ಎಸ್. ಸ್ಪಷ್ಟಪಡಿಸಿದರು.

ಬಂಡವಾಳಗಾರರು ಮತ್ತು ಜಮೀನ್ದಾರರು ಹಾಗೂ ವಿದೇಶಿ ಬಂಡವಾಳಗಾರರ ಪರವಾದ ಆರ್ಥಿಕ ನೀತಿಗಳನ್ನು ಪಾಲಿಸಿಕೊಂಡು ಬರುತ್ತಿರುವ ಕಾಂಗ್ರೆ, ಜನತಾ ಮತ್ತು ಲೋಕದಳ ಅಥವಾ ಅದೇ ರೀತಿಯ ಇನ್ನಾವುದೇ ಪಕ್ಷಗಳಿಂದ ದೇಶದ ಸಮಸ್ಯೆ ಬಗೆಹರಿಯದು ಎಂದ ಇ. ಎಂ. ಎಸ್. ಅವರು ಏನಾದರೊಂದು ಸುಧಾರಣೆ ಕಾಣಬೇಕೆಂದರೆ...ಕಾರ್ಮಿಕರ, ರೈತರ, ಮಧ್ಯಮವರ್ಗದವರ, ಮಹಿಳೆಯರ, ದಲಿತರ, ಅಲ್ಪಸಂಖ್ಯಾತರ, ಯುವಜನ-ವಿದ್ಯಾರ್ಥಿಗಳ ಸಂಘಟನೆಯಲ್ಲಿ ತೊಡಗಿರುವ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಹಾಗೂ ರಾಜಕೀಯ ಪಕ್ಷಗಳಿಂದ ಮಾತ್ರ ಸಾಧ್ಯ ಎಂದು ಸಾರಿದರು.

ಜನತಾ ಪಕ್ಷದ ಸರ್ಕಾರ ಬೆಲೆಏರಿಕೆಗೆ ಕಾರಣ ಎಂದು ದೂಷಿಸಿ 19 ತಿಂಗಳ ಹಿಂದೆ ಮತ್ತೆ ಅಧಿಕಾರಕ್ಕೆ ಬಂದ ಇಂದಿರಾ ಸರ್ಕಾರವು ತಕ್ಷಣವೇ ಸೀಮೆಎಣ್ಣೆ, ಪೆಟ್ರೋಲ್, ಡೀಸೆಲ್ ಬೆಲೆಯನ್ನು ಏರಿಸಿತು. ಆದ್ದರಿಂದ ಬೆಲೆಏರಿಕೆಗೆ ಅವರು ಕಾರಣ-ಇವರು ಕಾರಣ ಎನ್ನುವುದು ಬರೀ ಬೂಟಾಟಿಕೆಯಾಗುತ್ತದೆ ಎಂದು ಇ. ಎಂ. ಎಸ್. ಹೇಳಿದರು.

ಆರ್ಥಿಕ ಪ್ರಗತಿಯ ಪ್ರಾಥಮಿಕ ಹಂತವಾದ ಭೂಸುಧಾರಣೆಯೇ ಇನ್ನೂ ಕಾಂಗ್ರೆ-ಜನತಾ ಆಳ್ವಿಕೆಯ ರಾಜ್ಯಗಳಲ್ಲಿ ನಡೆದಿಲ್ಲ. ಭಾರಿ ಜಮೀನ್ದಾರರಿಂದ ಧಾನ್ಯ ಸಂಗ್ರಹಣೆಯನ್ನು ಈ ಸರ್ಕಾರಗಳು ಮಾಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಗೇಣಿದಾರರಿಗೆ ಭೂಮಿಯಾಗಲೀ, ಧಾನ್ಯದ ಬಳಕೆದಾರರಾದ ಕೈಗಾರಿಕಾ ಕಾರ್ಮಿಕರು ಮತ್ತು ಮಧ್ಯಮವರ್ಗದ ನೌಕರರಿಗೆ ನ್ಯಾಯಬೆಲೆಯ ಅಂಗಡಿಗಳ ಮೂಲಕ ದಿನಬಳಕೆಯ ವಸ್ತುಗಳಾಗಲೀ ಹೇಗೆ ದೊರೆಯಲು ಸಾಧ್ಯ ಎಂದು ಇ. ಎಂ. ಎಸ್. ಪ್ರಶ್ನಿಸಿದರು.

ತಾವು ಬೆಳೆದ ಬೆಳೆಗಳಿಗೆ ಲಾಭದಾಯಕ ಬೆಲೆ ದೊರೆಯುವ ನಾಡಿನ ರೈತವರ್ಗ ಚಳುವಳಿಯ ಮಾರ್ಗ ಹಿಡಿದಿದೆ. ಈ ರೈತ ಸಮೂಹದ ಎಲ್ಲಾ ಬೇಡಿಕೆಗಳು ನ್ಯಾಯಬದ್ಧ ಬೇಡಿಕೆಗಳೇ ಆಗಿವೆ ಎಂದು ಸಮರ್ಥಿಸಿ ತಮ್ಮ ಪಕ್ಷವು ರೈತರ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುವುದೆಂದು ಸಿ. ಪಿ. ಐ. (ಎಂ) ಪ್ರಧಾನ ಕಾರ್ಯದರ್ಶಿ ಘೋಷಿಸಿದರು.

ರೈತರ ಬೇಡಿಕೆಗಳ ಬೆಂಬಲಾರ್ಥ ಕಳೆದ ಮಾರ್ಚ್ 26ರಂದು ರಾಷ್ಟ್ರದ

[ಕಡೇ ಪುಟ ನೋಡಿ]

ಭಾರತದಲ್ಲಿ ಕೈಗಾರಿಕೋದ್ಯಮ ಎದುರಿಸುತ್ತಿರುವ ಬಿಕ್ಕಟ್ಟು ರಾಷ್ಟ್ರೀಯ ಪ್ರಮುಖದ್ದು. ಭೂಸುಧಾರಣೆಯಂತಹ ಗಂಭೀರ ವಿಷಯಗಳಿಗೆ ಸಲ್ಲತಕ್ಕ ಆದ್ಯತೆಯನ್ನೀಯುದೆ. ಬಹುಸಂಖ್ಯಾತ ಜನರು ಬಡತನದ ರೇಖೆಯ ಕೆಳಗೇ ಇರುವಾಗ, ಕೈಗಾರಿಕೆಯ ಬೆಳವಣಿಗೆಯ ದರಗಳು ಕುಗ್ಗಿಸುವಷ್ಟು ಕೆಳಮಟ್ಟದಲ್ಲಿವೆ. ಬಂಡವಾಳಶಾಹೀ ರೂಢಿಗಳಿಗನುಗುಣವಾಗಿ ನಡೆಯುತ್ತಿರುವ ಪ್ರತಿಷ್ಠಾಪಿತ ಕೈಗಾರಿಕೆಗಳೂ ಅಪಾರ ಸಮಸ್ಯೆಗಳನ್ನೆದುರಿಸುತ್ತಿವೆ. ಹೀಗಿದ್ದಾಗ್ಯೂ, ಉದ್ಯೋಗಾವಕಾಶ ನಿರ್ಮಾಣ, ಆರ್ಥಿಕತೆಯನ್ನು ಹಾಗೂ ದುಡಿಯುವವರ್ಗಗಳ ಜೀವನ ಮಟ್ಟವನ್ನು ಮೇಲಕ್ಕೆತ್ತುವ ಉದ್ದೇಶವಿಟ್ಟುಕೊಂಡು ನಾವು ರಾಜ್ಯದ ಒಟ್ಟಾರೆ ಕೈಗಾರಿಕಾ ಸನ್ನಿವೇಶದಲ್ಲಿ ಹೊಸ ದಿಗಂತಗಳ ಹಾಗೂ ಹೊಸ ಮಾರ್ಗಗಳ ಅನ್ವೇಷಣೆಯಲ್ಲಿದ್ದೇವೆ.

ನಾಲ್ಕು ವರ್ಷಗಳ ಹಿಂದೆ, ಎಡರಂಗ ಸರಕಾರ ನಾಯಕತ್ವ ವಹಿಸಿಕೊಂಡಾಗ ಘೋರ ಪರಿಸ್ಥಿತಿಯಿತ್ತು. ಬಂಡವಾಳ ಮೂಲಗಳ ಅಭಾವ, ಕಚ್ಚಾ ಸಾಮಗ್ರಿಗಳ ಕೊರತೆ, ಸಂಘಟಿತ ಮಾರಾಟ ಹಾಗೂ ಮಾರುಕಟ್ಟೆಯ ಬೆಂಬಲ ಇಲ್ಲದಿರುವುದು ಇವೆಲ್ಲಾ ರಾಜ್ಯದ ಕೈಗಾರಿಕೆಗಳನ್ನು ಕುಂಠಿತಗೊಳಿಸಿದ್ದವು. ಎಡರಂಗ ಸರಕಾರ ಸವಾಲನ್ನು ಅಂಗೀಕರಿಸಿದ್ದು ಇಲ್ಲಿಂದ.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ತಮ್ಮ ಅಧೀನ ಕೈಗಾರಿಕೆಗಳಾಗಿ ತಮ್ಮಲ್ಲಿ ಅವಕಾಶ ಒದಗಿಸಬೇಕೆಂದು ರಾಜ್ಯಸರಕಾರ ದೊಡ್ಡ ಕೈಗಾರಿಕೆಗಳಿಗೆ ಮಾಡಿಕೊಂಡ ವಿನಂತಿಗೆ ಸುಮಾರಾಗಿ ಯಾರೂ ಕಿವಿಗೊಡಲಿಲ್ಲ. ವಾತಾವರಣ ಪ್ರತಿಕೂಲವಾಗಿತ್ತು. ಆದರೆ ಎಡರಂಗ ಸರಕಾರ ಸೂಕ್ತ ಕೈಗಾರಿಕಾ ವಾತಾವರಣ ನಿರ್ಮಿಸಲು ಕೈಲಾದ ಎಲ್ಲಾ ಪ್ರಯತ್ನ ನಡೆಸಿತು.

ಈ ಸತತ ಪ್ರಯತ್ನಗಳ ಪರಿಣಾಮವಾಗಿ ಹಣ ಹೂಡಿಕೆಯ ಪರಿಸ್ಥಿತಿ ಬಹಳಷ್ಟು ಸುಧಾರಿಸಿತು. ಮಾತ್ರವಲ್ಲ ಉದ್ಯೋಗ ಸಾಮರ್ಥ್ಯವೂ ಗಮನಾರ್ಹವಾಗಿ ಹೆಚ್ಚಿತು.

ಹೊಸ ಯೋಜನೆಗಳು :

ಒಟ್ಟು 899.94 ಕೋಟಿ ರೂಪಾಯಿಗಳನ್ನು ತೊಡಗಿಸಿದ 451 ಹೊಸ ಯೋಜನೆಗಳಿಗೆ ಕೇಂದ್ರ ಸರಕಾರ ಅನುಮತಿ ನೀಡಿದೆ. ಇವುಗಳಲ್ಲಿ 153 ಕೋಟಿ ರೂ. ಹೂಡಿಸಿದ 200 ಯೋಜನೆಗಳು ಆಗಲೇ ನೆರವೇರಿವೆ.

ಉದ್ಯಮಶೀಲತೆಗೆ ಪ್ರೋತ್ಸಾಹ :

ಇದಲ್ಲದೆ, ಅಭಿವೃದ್ಧಿ ಯೋಜನೆಗಳಿಗೆ ಬಡ್ಡಿರಹಿತ ಸಾಲ, ಅಧಿಕ ಉದ್ಯೋಗಾವಕಾಶ ಮತ್ತು ಹಿಂದುಳಿದ ಕ್ಷೇತ್ರಗಳಿಗೆ ಕೈಗಾರಿಕೆಗಳನ್ನು ಹರಡಲು ಆಕರ್ಷಕ ಸಹಾಯದ್ರವ್ಯ ಒದಗಿಸುವ ಪಶ್ಚಿಮ ಬಂಗಾಲ ಪ್ರೋತ್ಸಾಹ ಯೋಜನೆ, 1978 ಇವು ಬೆಳವಣಿಗೆಗೆ ಅನುಕೂಲಕರವಾದ ವಾತಾವರಣ ಸೃಷ್ಟಿಸಿವೆ.

ಹೊಸ ಹಣ ಹೂಡಿಕೆಯನ್ನು ಆಕರ್ಷಿಸಲು ಪಶ್ಚಿಮ ಬಂಗಾಲ ಕೈಗಾರಿಕಾಭಿವೃದ್ಧಿ ಕಾರ್ಪೊರೇಷನ್ 1981ರ ಮಾರ್ಚ್ ಅಂತ್ಯದವರೆಗೆ ದೊಡ್ಡ ಹಾಗೂ ಮಧ್ಯಮ ವಲಯದಲ್ಲಿ ಸದ್ಯ ಕಾರ್ಯನಿರ್ವಹಿಸುತ್ತಿರುವ 172 ಘಟಕಗಳಿಗೆ ರಾಜ್ಯ ಪ್ರೋತ್ಸಾಹಕ ಯೋಜನೆಯ ಪ್ರಕಾರ ನೆರವು ಮಂಜೂರು ಮಾಡಿದೆ. ಈ ಯೋಜನೆಯ ಒಟ್ಟು ವೆಚ್ಚ 329.52 ಕೋಟಿ ರೂಪಾಯಿಗಳು.

ಉದ್ಯೋಗಾವಕಾಶ ನಿರ್ಮಾಣ :

ಉದ್ಯೋಗದ ಹೊಸ ಮಾರ್ಗಗಳು ಈ ರೀತಿ ತೆರೆದುಕೊಂಡಿವೆ. 1977ರಿಂದ 1979ರ ನಡುವೆ ನೋಂದಣಿ ಹೊಂದಿದ ಕೆಲಸ ನಿರ್ವಹಿಸುತ್ತಿರುವ ಕಾರ್ಖಾನೆಗಳ ಸಂಖ್ಯೆ 437ರಷ್ಟು ಹೆಚ್ಚಿದೆ. ಪರಿಣಾಮವಾಗಿ ಸರಾಸರಿ ದೈನಿಕ ಉದ್ಯೋಗಾವಕಾಶ 22,000ದಷ್ಟು ಹೆಚ್ಚಿತು. ಮತ್ತು ಸಂಘಟಿತ ವಲಯದ ಉದ್ಯೋಗಾವಕಾಶ 43,000ದಷ್ಟು ಹೆಚ್ಚಿತು.

ಸಣ್ಣಪ್ರಮಾಣದ ಕೈಗಾರಿಕೆಗಳಿಗೆ ಸುಮನ್ಮೂಲ ಶೇಖರಣೆ :

ಸಣ್ಣ ಪ್ರಮಾಣದ ವಲಯವನ್ನು ಪುನರುಜ್ಜೀವನಗೊಳಿಸಲಾಗಿದೆ. 1979ರಿಂದ 1981ರ ನಡುವೆ ವಿವಿಧ ವ್ಯಾಪಾರೀ ಬ್ಯಾಂಕುಗಳಿಂದ ಮಂಜೂರಾದ 54.20ಕೋಟಿ ರೂಪಾಯಿಗಳನ್ನು 6,648 ಸಾಲದ ಅರ್ಜಿದಾರರಲ್ಲಿ ಹಂಚಲಾಯಿತು. ಇದರಿಂದ 40,950 ಜನರಿಗೆ ನೌಕರಿ ಒದಗಿಸಿದಂತಾಯಿತು.

D. I. R. ಯೋಜನೆಯ ಪ್ರಕಾರ ಮಂಜೂರಾದ 152.44 ಲಕ್ಷರೂಪಾಯಿಗಳಿಂದ ಇನ್ನೂ 23,447 ಜನರಿಗೆ ಉದ್ಯೋಗ ದೊರಕಿತು.

ಖಾದಿ ಹಾಗೂ ಗ್ರಾಮೋದ್ಯೋಗಕ್ಕೆ ಹಣಕಾಸು :

ಇದಕ್ಕೆ ಮುಂಚೆ ಸರಕಾರದಿಂದ ಎಂದೂ ಹಣಕಾಸು ನೆರವು ಪಡೆದಿರದ ಹಳ್ಳಿಗಳಿಗೆ 194 ಲಕ್ಷರೂಪಾಯಿಗಳ ನೆರವು ಹಾಗೂ ಸಾಲಕೊಡಲಾಯಿತು. ಇದು 27,083 ಜನರಿಗೆ ಉದ್ಯೋಗಾವಕಾಶ ನಿರ್ಮಿಸಿತು.

ಸಣ್ಣ ಕೈಗಾರಿಕೆಗಳ ಪ್ರಸಾರ :

ಕಳೆದ ನಾಲ್ಕು ವರ್ಷಗಳಲ್ಲಿ 10,495 ಸಣ್ಣಪ್ರಮಾಣ ಕೈಗಾರಿಕೆಗಳು ಹೊಸದಾಗಿ ಕಾರ್ಯಾರಂಭ ಮಾಡಿದವು. ಫಲವಾಗಿ 54,013 ಕಸಬುದಾರರಿಗೆ ಉದ್ಯೋಗ ದೊರಕಿತು.

ಕೈಕಸಬು ಹಾಗೂ ಕೈಮಗ್ಗಕ್ಕೆ ಉತ್ತೇಜನೆ :

ಕೈಕಸಬು ಹಾಗೂ ಕೈಮಗ್ಗ ಕೈಗಾರಿಕೆಯ ಹೊಸ-ಹೊಸ ವಿಧಗಳನ್ನು ರೂಪಿಸುವ ನವೀನ ಯೋಜನೆಯೊಂದನ್ನು ಕೈಗೆತ್ತಿಕೊಳ್ಳಲಾಗಿದೆ. ಒಳಗಣ ಅಲಂಕಾರ ಹಾಗೂ ಬಹುಮಾನದ ಕರಕುಶಲ ವಸ್ತುಗಳು ಮತ್ತು ರೇಷ್ಮೆ ಟಾಂಗೇಲ್, ಪೊಲಿಯೆಸ್ಟರ್ ಶರ್ಟಿಂಗ್, ಕರವಸ್ತ್ರ, ಲುಂಗಿ ಇತ್ಯಾದಿ ಕೈಮಗ್ಗದ ವಸ್ತುಗಳನ್ನು ಬಹಳಷ್ಟು ನಮೂನೆಗಳಲ್ಲಿ ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿದೆ.

ರೇಷ್ಮೆ ಕೈಗಾರಿಕೆಯ ಅಭಿವೃದ್ಧಿ :

ರಾಜ್ಯ ಸರಕಾರ ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗಾಗಿಯೂ ಹೊಸ ಯೋಜನೆಗಳನ್ನು ಆರಂಭಿಸಿದೆ. ಶುಷ್ಕ ಗೂಡುಗಳು, ನೂಲುವ ಘಟಕಗಳು, ಸಂತಾನಾಭಿವೃದ್ಧಿ ಫಾರ್ಮುಗಳು ಹಾಗೂ ಹುರಿಗೊಳಿಸುವ ಸ್ಥಾವರಗಳನ್ನು ರಚಿಸುವ ಯೋಜನೆಗಳು ಹೊಸದಾಗಿ ಕೈಗೆತ್ತಿಕೊಂಡ ಯೋಜನೆಗಳಲ್ಲಿ ಕೆಲವು.

ಸಂಘಟಿತ ಮಾರಾಟ ಬೆಂಬಲ :

ಉತ್ಪಾದಕರಿಂದ ನೇರವಾಗಿ ಕೊಂಡು ಅವರನ್ನು ಗ್ರಾಮೀಣ ಲೇವಾದೇವಿಗಾರರಿಂದ ರಕ್ಷಿಸಲು 29 ಹೊಸ ಮಾರುಕಟ್ಟೆ ಕೇಂದ್ರಗಳನ್ನು ಪಂಚಾಯತು ಸಮಿತಿಗಳ ಮೇಲ್ವಿಚಾರಣೆಯಲ್ಲಿ ಈಗಾಗಲೇ ತೆರೆಯಲಾಗಿದೆ.

ಸಹಕಾರೀ ಕೈಮಗ್ಗ :

1976-77ರವರೆಗೆ ಪ್ರಾಥಮಿಕ ಸಹಕಾರ ಸಂಘಗಳಿಗೆ ಸರಕಾರ ಒದಗಿಸಿದ ಹಣಕಾಸು ಕೇವಲ 3 ಲಕ್ಷರೂಪಾಯಿಗಳು. ಕಳೆದನಾಲ್ಕು ವರ್ಷಗಳಲ್ಲಿ ಇದು ಹೆಚ್ಚಿ 1,53,55,000 ವಾಯಿತು. ತನ್ಮೂಲಕ 40% ಅಭಿವೃದ್ಧಿ ಸಾಧಿಸಿದಂತಾಯಿತು.

ಹಿಂದುಳಿದ ಕ್ಷೇತ್ರಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿ :


ಕೈಗಾರಿಕಾಭಿವೃದ್ಧಿಯನ್ನು ಹಿಂದುಳಿದ ಕ್ಷೇತ್ರಗಳಿಗೂ ಹರಡಿಸಲು ಹಲ್ದಿಯಾ, ಖರಗಪುರ್ ಹಾಗೂ ಕಲ್ಯಾಣಿ ಮುಂತಾದ ಕ್ಷೇತ್ರಗಳಲ್ಲಿ ಸರಕಾರ 742 ಎಕರೆ ಜಮೀನನ್ನು ಪಡಕೊಂಡಿದೆ. ಉದ್ಯೋಗಾವಕಾಶ ಹೆಚ್ಚಿಸಲು ಈ ಎಲ್ಲಾ ಕ್ಷೇತ್ರಗಳಲ್ಲಿ ಸೂಕ್ತ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

ಸಂಪೂರ್ಣ ಬೆಳವಣಿಗೆ ಬಗ್ಗೆ ಕಳಕಳಿ :

ಈ ಎಲ್ಲಾ ಯೋಜನೆಗಳೊಂದಿಗೆ ಸರಕಾರ ಇಲೆಕ್ಟ್ರಾನಿಕ್ಸ್, ಔಷಧಿಗಳು, ಗಣಿ ಉದ್ಯಮ ಮತ್ತು ಖನಿಜಗಳು, ರಾಸಾಯನಿಕಗಳು, ಕೃತಕ ಗೊಬ್ಬರಗಳು ಮುಂತಾದ ಕೈಗಾರಿಕೆಗಳನ್ನು ಪರಸ್ಪರ ಹೊಂದಿಕೊಂಡಂತೆ ಅಭಿವೃದ್ಧಿಗೊಳಿಸುವ ಒಂದು ಕಾರ್ಯಕ್ರಮವನ್ನು ಆರಂಭಿಸಿದೆ. ಅಲ್ಲದೆ ಸ್ವಂತ ಉದ್ಯೋಗ ನಡೆಸುವ ಪದವೀಧರರಲ್ಲಿ ಉದ್ಯಮಶೀಲತೆಯ ಚೈತನ್ಯಕ್ಕೆ ಪ್ರೋತ್ಸಾಹ ನೀಡಲು ವಿಶೇಷ ತರಬೇತಿ ಕೂಡಾ.

ಪಶ್ಚಿಮ ಬಂಗಾಲ ಸರಕಾರ ಸ್ಥಿತಿಯನ್ನು ಸ್ವಲ್ಪ ಬಲಪಡಿಸಿಕೊಂಡಿದೆ. ಮಾಡಬೇಕಾದ ಕೆಲಸ ಅಗಾಧ ಶ್ರಮದ್ದು; ಸ್ವೀಕರಿಸಬೇಕಾದ ಸವಾಲು ದಿಗಿಲುಗೊಳಿಸುವಂತದ್ದು. ಸಾಯುತ್ತಲಿದ್ದ ಒಂದು ಕೈಗಾರಿಕಾವಲಯವನ್ನು ಪುನರುಜ್ಜೀವನಗೊಳಿಸಬೇಕಾಗಿತ್ತು. ಮಾಡಬೇಕಾದ್ದು ಇನ್ನೂ ಬಹಳವಿದ್ದರೂ ಪಶ್ಚಿಮ ಬಂಗಾಳದಲ್ಲಿ ಕೈಗಾರಿಕೋದ್ಯಮ ದೃಢ ವಿಶ್ವಾಸದಿಂದ ಚಲಿಸುತ್ತಿದೆ.

ಪಶ್ಚಿಮ ಬಂಗಾಳ ಸರಕಾರ



ಹಳೆ ಬೇರು - ಹೊಸ ಚಿಗುರು

ಕರ್ನಾಟಕ ರಾಜ್ಯದಲ್ಲಿ ಕಳೆದ ಹಲವು ವರ್ಷಗಳಿಂದ ನಮ್ಮ ಪಕ್ಷವು ಬೆಳೆಯುತ್ತಿದೆ. ನಮ್ಮ ಪಕ್ಷದ 'ಸಾಲ್ಕಿಯಾ ಪ್ಲೀನಮ್'' ನಲ್ಲಿ ಅಂಗೀಕರಿಸಲಾದ "ವಿಸ್ತರಣೆ ಮತ್ತು ಸ್ಥಿರೀಕರಣ" (Expansion and Consolidation) ಎಂಬ ಮಾರ್ಗವನ್ನು ನಾವೂ ನಮ್ಮ ರಾಜ್ಯದಲ್ಲಿ ಅನುಷ್ಠಾನಕ್ಕೆ ತಂದಿದ್ದೇವೆ. ಸಹಜವಾಗಿಯೇ ಬಹಳಷ್ಟು ಮಂದಿ ಯುವ ಕಾರ್ಯಕರ್ತರು ಪಕ್ಷವನ್ನು ಸೇರುವಂತಾಗಿದೆ ಮಾತ್ರವಲ್ಲ ಅವರಿಗೆ ಜವಾಬ್ದಾರಿಯ ಸ್ಥಾನಗಳನ್ನೂ ನೀಡಲಾಗಿದೆ. ಇದರಿಂದ ಹಳೆಯ ಕಾರ್ಯಕರ್ತರು ಹೊಸಬರನ್ನು ಮುಂದೆ ಬರಲು ಬಿಡುತ್ತಿಲ್ಲವೆಂದು ತಿಳಿಯಬೇಕೇ ಎಂಬ ಪ್ರಶ್ನೆಯೂ ಹುಟ್ಟಿಕೊಂಡಿದೆ.

ಹಳೆಯ ಕಾರ್ಯಕರ್ತರು, ಕಾಂ. ಸ್ಟಾಲಿನ್ ಒಮ್ಮೆ ವರ್ಣಿಸಿದಂತಹ "ಎಂದೂ ತಿದ್ದಲಾಗದ ಬಾಯಿಬಡುಕ"ರಂತೆ ಇದ್ದಾರೆ ಎಂದು ಒಮ್ಮೊಮ್ಮೆ ನಮ್ಮ ಹೊಸ ಕಾರ್ಯಕರ್ತರು ದೂರುವುದಿದೆ. ಹಳೆಯ ತಲೆಮಾರಿನ ಕಾರ್ಯಕರ್ತರಲ್ಲಿ ಕೆಲವರಂತೂ ತಾವು ಯಾವುದೋ ಕಾಲದಲ್ಲಿ ಪಕ್ಷಕ್ಕಾಗಿ ಮಾಡಿದ ಅಮೋಘ ಸೇವೆಯ ಬಗ್ಗೆ ಮಾತ್ರ ಮಾತಾಡುತ್ತಾರೆ ಹೊರತು ಹೊಸದಾಗಿ ಏನೂ ಮಾಡುತ್ತಿಲ್ಲವೆಂದೂ ಹೊಸಬರು ಆಕ್ಷೇಪಿಸುವುದಿದೆ. ಹಾಗೆಯೇ ತರುಣ ಕಾರ್ಯಕರ್ತರು ತೋರಿಸುತ್ತಿರುವ ಉತ್ಸಾಹವು ತಮಗಿಷ್ಟಬಂದಂತೆ ದನಕರುಗಳನ್ನು ಹುಲ್ಲುಗಾವಲಿನ ತುಂಬಾ ಓಡಾಡಿಸಿ ಅವು ಹುಲ್ಲು ಮೇಯದಂತೆ ಮಾಡುವ ಈಗತಾನೇ ಕೆಲಸಕ್ಕೆ ಸೇರಿದ ದನಕಾಯುವ ಹುಡುಗರ ಉತ್ಸಾಹದಂತಿದೆ ಎಂದು ಕೆಲವರು ಹಳೆಯ ಕಾರ್ಯಕರ್ತರು ದೂರುತ್ತಾರೆ.

ನನಗೊಮ್ಮೆ ಅವಕಾಶ ಸಿಕ್ಕಿದಾಗ ಕಾಂ. ಇ. ಎಂ. ಎಸ್. ಅವರೊಡನೆ ಈ ಪ್ರಶ್ನೆಯನ್ನು ಕುರಿತು ನಾನು ಚರ್ಚಿಸಿದ್ದೆ. ಆ ಸಂದರ್ಭದಲ್ಲಿ ಕಾಂ. ನಂಬೂದಿರಿಪಾಡ್ ಕಾರ್ಯಕರ್ತರನ್ನು ಆರಿಸುವ, ಅವರನ್ನು ಜವಾಬ್ದಾರಿಯುತ ಸ್ಥಾನಗಳಿಗೇರಿಸುವ ಮತ್ತು ಕೆಲಸಗಳನ್ನು ಅವರಿಗೆ ಹಂಚಿಕೊಡುವ ಕ್ರಮದ ಕುರಿತು ಕಾಂ. ಸ್ಟಾಲಿನ್ ಸಿ. ಪಿ. ಎಸ್. ಯು. (ಬೊಲ್ಶೆವಿಕ್)ನ 18ನೇ ಕಾಂಗ್ರೆಸ್ಸಿಗೆ ನೀಡಿದ ವರದಿಯ ಕಡೆಗೆ ನನ್ನ ಗಮನ ಸೆಳೆದರು. ನಮ್ಮೆಲ್ಲ ಸಂಗಾತಿಗಳಿಗೆ ಉಪಯುಕ್ತವಾಗುವುದೆನ್ನುವ ದೃಷ್ಟಿಯಿಂದ ಈ ವರದಿಯ ಸಂಬಂಧಪಟ್ಟ ಭಾಗವನ್ನು ಇಲ್ಲಿ ಉದ್ಧರಿಸಲಾಗಿದೆ.

"ಹೊಸ ಮತ್ತು ಯುವ ಪೀಳಿಗೆಯ ಕಾರ್ಯಕರ್ತರಿಗೆ ಸಕಾಲದಲ್ಲಿ ಉತ್ತೇಜನ ನೀಡಬೇಕಾದುದು ನಾವು ಮಾಡಬೇಕಾದ ಮುಖ್ಯ ಕೆಲಸ. ಆದರೆ ನಮ್ಮ ಜನ ಈ ಕುರಿತು ಸಾಕಷ್ಟು ತಿಳುವಳಿಕೆ ಹೊಂದಿಲ್ಲವೆಂದೇ ನನಗನಿಸುತ್ತದೆ. ಜನಗಳನ್ನು ಆರಿಸುವಲ್ಲಿ ನಾವು ಹಳೆಯ ಕಾರ್ಯಕರ್ತರ ಮೇಲೆಯೇ ಹೆಚ್ಚಾಗಿ ಅವಲಂಬಿಸಿಕೊಂಡಿರಬೇಕೆಂದು ಕೆಲವರು ಭಾವಿಸುತ್ತಾರೆ. ಇನ್ನು ಕೆಲವರು, ಹಾಗಲ್ಲ ನಾವು ಹೊಸ ಕಾರ್ಯಕರ್ತರ ಮೇಲೆಯೇ ಹೆಚ್ಚು ಆಧರಿಸಿಕೊಂಡಿರಬೇಕೆನ್ನುತ್ತಾರೆ. ಇವರಿಬ್ಬರ ಅಭಿಪ್ರಾಯವೂ ತಪ್ಪೆಂದು ನನಗನಿಸುತ್ತದೆ. ಹಳೆಯ ಕಾರ್ಯಕರ್ತರು ಪಕ್ಷ ಮತ್ತು ರಾಷ್ಟ್ರದ ಪಾಲಿಗೆ ಅತ್ಯಂತ ಅಮೂಲ್ಯ ಆಸ್ತಿಯಾಗಿದ್ದಾರೆನ್ನುವುದರಲ್ಲಿ ಸಂದೇಹವೇ ಇಲ್ಲ. ಹೊಸ ಕಾರ್ಯಕರ್ತರ ಬಳಿ ಇಲ್ಲದಿರುವ ಅನೇಕ ಗುಣಗಳು-ನೇತೃತ್ವ ನೀಡುವಲ್ಲಿರುವ ವಿಶಾಲ ಅನುಭವ, ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತಗಳಲ್ಲಿ ಆಳವಾದ ಶಿಕ್ಷಣ, ವಿದ್ಯಮಾನಗಳ ಕುರಿತು ತಿಳುವಳಿಕೆ ಮತ್ತು ನಿರ್ದೇಶನ ಕೊಡುವ ಸಾಮರ್ಥ್ಯ ಇವೆಲ್ಲ ಹಳೆಯ ಕಾರ್ಯಕರ್ತರಲ್ಲಿ ವಿಫಲವಾಗಿವೆ. ಆದರೆ ಇಂತಹ ಕಾರ್ಯಕರ್ತರು ನಮ್ಮಲ್ಲಿ ಸಾಕಷ್ಟು ಸಂಖ್ಯೆಯಲ್ಲಿಲ್ಲ-ಇದು ಮೊದಲನೆಯ ಸಮಸ್ಯೆ. ಇವರಲ್ಲೂ ತುಂಬಾ ಮಂದಿ ನಿಸರ್ಗದ ನಿಯಮಗಳಿಗನುಸಾರವಾಗಿ ಚಟುವಟಿಕೆಯಿಂದ ದೂರವಾಗುತ್ತಿದ್ದಾರೆ. ಎರಡನೆಯದಾಗಿ ಈ ಹಳೆಯ ಕಾರ್ಯಕರ್ತರಲ್ಲಿ ಕೆಲವರು ಪುರಾತನ ಕಾಲದಿಂದ ದೃಷ್ಟಿ ಕೀಳಿಸುವುದೇ ಇಲ್ಲ; ಸದಾಕಾಲ ಭೂತಕ್ಕೇ ಅಂಟಿಕೊಂಡಿರುತ್ತಾರೆ. ಹಳೆಯ ಕ್ರಮಗಳಿಗೇ ಜೋತುಬಿದ್ದು ಹೊಸ ಬದುಕನ್ನು ಗಮನಿಸುವಲ್ಲಿ ಅವರು ವಿಫಲರಾಗುತ್ತಾರೆ. ಹೊಸತಿನ ಬಗ್ಗೆ ಅರಿವು ಕಳಕೊಳ್ಳುವ ಈ ಪ್ರವೃತ್ತಿ ತೀರಾ ಗಂಭೀರ ಮತ್ತು ಅಪಾಯಕಾರಿಯಾದ ದೌರ್ಬಲ್ಯ. ಹೊಸಬರಿಗೆ ಹಳೆಯ ಕಾರ್ಯಕರ್ತರಲ್ಲಿರುವಂತಹ ಅನುಭವ, ಶಿಕ್ಷಣ, ವಿದ್ಯಮಾನಗಳ ಕುರಿತು ತಿಳುವಳಿಕೆ ಮತ್ತು ನಿರ್ದೇಶನ ಕೊಡುವ ಸಾಮರ್ಥ್ಯ ಇಲ್ಲದಿರಬಹುದು ನಿಜ; ಆದರೆ ಮೊದಲನೆಯದಾಗಿ ಈ ಯುವ ಕಾರ್ಯಕರ್ತರು ಬಹುಸಂಖ್ಯೆಯಲ್ಲಿದ್ದಾರೆನ್ನುವುದನ್ನು ಗಮನಿಸಬೇಕು. ಎರಡನೆಯದಾಗಿ ಅವರಿನ್ನೂ ತರುಣರು ಹಾಗಾಗಿ ಅವರು ಚಟುವಟಿಕೆಯಿಂದ ದೂರಹೋಗುವ ಅಪಾಯ ಅಷ್ಟಾಗಿಲ್ಲ. ಮೂರನೆಯದಾಗಿ ಅವರಿಗೆ ಹೊಸ ಬದುಕಿನ ಅರಿವಿದೆ. ಇದು ಪ್ರತಿಯೊಬ್ಬ ಬೊಲ್ಶೆವಿಕ್ ಕಾರ್ಯಕರ್ತನಲ್ಲಿರಬೇಕಾದ ಅಮೂಲ್ಯ ಗುಣ. ನಾಲ್ಕನೆಯದಾಗಿ ಹೊಸಬರು ಬೆಳೆಯುತ್ತಿರುವ ಮತ್ತು ತಿಳುವಳಿಕೆ ಪಡೆಯುತ್ತಿರುವ ವೇಗ ಎಷ್ಟಿದೆಯೆಂದರೆ ಅವರು ಹಳೆಯ ತಲೆಮಾರಿನವರನ್ನು ಹಿಂದಕ್ಕಟ್ಟಿ, ಅಥವಾ ಹಿರಿಯ ನಾಯಕರಿಗೆ ಜತೆ ಜತೆಯಾಗಿ ನಿಂತು ಹಳಬರ ಸ್ಥಾನಗಳನ್ನು ತಾವೇ ಪಡೆದುಕೊಳ್ಳುವ ಯೋಗ್ಯತೆಯನ್ನೂ ಗಳಿಸುವ ಕಾಲ ಬಹುದೂರವಿಲ್ಲವೆನಿಸುತ್ತದೆ. ಹಾಗಾಗಿ ಹಳೆಯ ಕಾರ್ಯಕರ್ತರ ಮೇಲೆ ಹೊಂದಿಕೊಂಡಿರಬೇಕೋ, ಹೊಸಬರನ್ನು ಅವಲಂಬಿಸಿಕೊಂಡಿರಬೇಕೋ ಎನ್ನುವ ಪ್ರಶ್ನೆ ಹುಟ್ಟುವುದೇ ಇಲ್ಲ. ಹಳಬರನ್ನೂ ಹೊಸ ಕಾರ್ಯಕರ್ತರನ್ನೂ ಒಂದುಗೂಡಿಸಿ ರಾಷ್ಟ್ರದ ನೇತೃತ್ವದ ಮೇಳದಲ್ಲಿ ಅವರಿಬ್ಬರ ಐಕ್ಯವನ್ನು ಸಾಧಿಸಬೇಕು. ಇದಕ್ಕಾಗಿಯೇ ನಾವು ಹೊಸ ಕಾರ್ಯಕರ್ತರನ್ನು ಉನ್ನತ ಹುದ್ದೆಗಳಿಗಾಗಿ ಸಿದ್ಧಪಡಿಸುವ ಧೈರ್ಯ ತೋರಬೇಕು."

(ಪ್ರಾಬ್ಲಮ್ಸ್ ಆಫ್ ಲೆನಿನಿಸಂ- ಮಾಸ್ಕೊ 1947 -ಪುಟ 627-628)

ಮೈಸೂರಿನಲ್ಲಿ ನಡೆದ ನಮ್ಮ ಪಕ್ಷದ ಪ್ಲೀನಮ್ ಕೂಡಾ ಈ ವಿವಾದದ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ಸ್ಟಾಲಿನ್ ಹೇಳಿರುವಂತೆ ಹಳಬರನೂ ಹೊಸಬರನ್ನೂ ಒಂದುಗೂಡಿಸಲು ನಿರ್ಧರಿಸಿದೆ. ಸಂಘಟನೆಯ ಕುರಿತಾದ ನಿರ್ಣಯದಲ್ಲಿ ಇದಕ್ಕೆ ಸಂಬಂಧಿಸಿದ ಭಾಗವನ್ನು ನಮ್ಮ ಸಂಗಾತಿಗಳ ತಿಳುವಳಿಕೆಗಾಗಿ ಈ ಕೆಳಗೆ ಕೊಡಲಾಗಿದೆ.

5. ಪಾರ್ಟಿ ಸಂಘಟನೆಯನ್ನು ವಿಸ್ತರಿಸುವ ಮತ್ತು ಕ್ರೋಢೀಕರಿಸುವ ಕೆಲಸವನ್ನು ಕೈಗೊಳ್ಳುವ ಸಂದರ್ಭದಲ್ಲಿ, ಹಿಂದಿನ ದಿನಗಳ ಹೆಮ್ಮೆಯ ಘಟನೆಗಳನ್ನೂ, ಹಿರಿಯ ಮುಂದಾಳುಗಳ ಅಗಾಧ ಅನುಭವಗಳನ್ನೂ ಪಕ್ಷವು ಗುರುತಿಸಿಕೊಳ್ಳಬೇಕು. ಇದರ ಜತೆಗೇ ಸಂಘಟನೆಯ ವಿಸ್ತರಣೆಯ ಮೂಲಕ ಪಕ್ಷವು ಪಡೆದ ಹೊಸ ಸಂಗಾತಿಗಳ ಕುರಿತೂ ಹೆಮ್ಮೆಪಡಬೇಕು. ನಮ್ಮ ಕೆಲಸಗಳನ್ನು ಸ್ವಯಂ ಟೀಕೆಯ ಮೂಲಕ ವಿಮರ್ಶಿಸುವಾಗ, ಹಿಂದಿನ ಸಾಧನೆಗಳನ್ನು ಕಡೆಗಣಿಸುವ ಪ್ರವೃತ್ತಿಯನ್ನು ತಡೆಯಬೇಕು. ಇದೇ ವೇಳೆಗೆ, ಅಸಮರ್ಪಕ ಕಾರ್ಯವಿಧಾನಗಳಿಂದಾಗಿ ಉದ್ಭವಿಸಿದ ಸಂಘಟನಾ ನ್ಯೂನತೆಗಳನ್ನು ಸ್ವಯಂ ಟೀಕೆಯ ಮೂಲಕ ವಿಮರ್ಶಿಸುವಾಗ ಹೊಸ ನಿಷ್ಠಾವಂತ ಕಾರ್ಯಕರ್ತರ ಪ್ರವೇಶದಿಂದಾಗಿ ಪಕ್ಷವು ಗಳಿಸಿದ ಗಣನೀಯ ಸಾಧನೆಗಳನ್ನು ಗಮನದಲ್ಲಿಡಬೇಕು.

6. ವಿಸ್ತರಣೆಯನ್ನು ಕೈಗೊಂಡಾಗ ಪಕ್ಷಕ್ಕೆ ಹೊಸ ಕಾರ್ಯಕರ್ತರು ಬಂದರು. ಇವರು ಮುಖ್ಯವಾಗಿ ಮಾರ್ಕ್ಸ್‌ವಾದದ ಉನ್ನತ ಆದರ್ಶಗಳ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧೋರಣೆಗಳ ಕಡೆಗೆ ಆಕರ್ಷಿತರಾಗಿ ಬಂದರು. ಆದರೂ ಅವರಿಗೆ ಮಾರ್ಗದರ್ಶನವನ್ನೂ ಪಾರ್ಟಿ ಶಿಕ್ಷಣವನ್ನೂ ಕೊಟ್ಟು ಅವರನ್ನು ಕಾರ್ಮಿಕವರ್ಗದ ಕ್ರಾಂತಿಕಾರಿಗಳನ್ನಾಗಿ ರೂಪಿಸಬೇಕು. ವಿಸ್ತರಣೆಯ ಮೂಲಕ ಪಕ್ಷಕ್ಕೆ ಬರುವ ಹೊಸ ಕಾರ್ಯಕರ್ತರಿಗೆ ಸರಿಯಾದ ಸಂಘಟನಾ ವಿಧಾನಗಳನ್ನು ಕಲಿಸುವ ಕೆಲಸವನ್ನು ಪಕ್ಷವು ಕೈಗೊಳ್ಳಬೇಕಾಗಿದೆ. ಈ ವಿಷಯಕ್ಕೆ ಬೇಕಾದಷ್ಟು ಗಮನಕೊಡದಿದ್ದರೆ ಹೊಸ ಕಾರ್ಯಕರ್ತರು ಸರಿಯಾದ ರೀತಿಯಲ್ಲಿ ಕೆಲಸ ಮಾಡದಂತಹ ತಪ್ಪುಗಳಿಗೆ ನಾವು ಅವಕಾಶ ಮಾಡಿಕೊಟ್ಟಂತಾಗಬಹುದು. ಹೊಸ ಕಾರ್ಯಕರ್ತರಿಗೆ ಸರಿಯಾದ ಶಿಕ್ಷಣವನ್ನು ಒದಗಿಸುವುದರ ಜತೆಗೇ ಹಿರಿಯ ಸಂಗಾತಿಗಳನ್ನೂ ಒಳಗೊಂಡಂತೆ ಸಮಗ್ರವಾಗಿ ಪಕ್ಷವನ್ನು ಸಾಲ್ಕಿಯಾ ಪ್ಲೀನಮ್ ವರದಿ ಮತ್ತು ಗೊತ್ತುವಳಿಯ ಆಧಾರದಲ್ಲಿ ಮುನ್ನಡೆಸಬೇಕಾಗಿದೆ.

-(11-1-81ರ ಐಕ್ಯರಂಗದಿಂದ)

ಕಾರ್ಯಕರ್ತರ ಆಯ್ಕೆ ಅವರಿಗೆ ಬಡ್ತಿ ನೀಡಿ ಉನ್ನತ ಸ್ಥಾನಗಳಿಗೇರಿಸುವುದು ಮತ್ತು ಕರ್ತವ್ಯಗಳನ್ನು ಹಂಚಿಕೊಡುವಾಗ ಕಾಂ. ಸ್ಟಾಲಿನ್ ನಿರ್ದೇಶಿಸಿರುವಂತೆ ಮತ್ತು ನಮ್ಮ ಪಕ್ಷದ ಮೈಸೂರು ಪ್ಲೀನಮ್‌ನ ನಿರ್ಣಯದಂತೆ ನಡೆದುಕೊಳ್ಳಬೇಕು. ನಮ್ಮ ಹೊಸ ಕಾರ್ಯಕರ್ತರಿಗೆ ಪ್ರೋತ್ಸಾಹ ನೀಡುವುದರಿಂದ ಮಾತ್ರ ನಾವು ಹೊಸ ಕ್ಷೇತ್ರಗಳಿಗೆ ನಮ್ಮ ಪ್ರಭಾವವನ್ನು ವಿಸ್ತರಿಸುವುದು ಸಾಧ್ಯ. ಆದರೆ ಹೀಗೆ ಸಾಧಿಸಲ್ಪಟ್ಟ ವಿಸ್ತರಣೆಯನ್ನು ಗಟ್ಟಿಮಾಡಿಕೊಳ್ಳಬೇಕಾದರೆ ಹಳಬರನ್ನು ಅಲಕ್ಷಿಸಬಾರದು. ಹಳಬರನ್ನು ಹೊಸಬರನ್ನು ಒಂದೇ ಸ್ವರಮೇಳದಂತೆ ಒಂದುಗೂಡಿಸಬೇಕು.

ಕಾಂ. ವಿ.ಜೆ.ಕೆ. ನಾಯರ್

ಏಷ್ಯನ್ನರ ಮೇಲೆ ಫ್ಯಾಸಿಸ್ಟರ ದೌರ್ಜನ್ಯ

ಬ್ರಿಟನ್ನಿನಲ್ಲಿ ಏಷ್ಯಾ ಮತ್ತು ಆಫ್ರಿಕನ್ನರ ಮೇಲೆ ಜನಾಂಗೀಯವಾದಿಗಳು ನಡೆಸುತ್ತಿರುವ ಬರ್ಬರ ಹಲ್ಲೆಯನ್ನು ನಂಬಬೇಕಾದರೆ ಕಣ್ಣಾರೆ ನೋಡಬೇಕು. ಅತ್ಯಂತ ಅಮಾನವೀಯವಾದ 'ಬ್ರಿಟಿಷ್ ರಾಷ್ಟ್ರೀಯತೆ' ಮಸೂದೆಯನ್ನು ಚರ್ಚಿನಿಂದ ಹಿಡಿದು ಬ್ರಿಟನ್ನಿನ ಲೇಬರ್ ಪಕ್ಷ, ಏಷ್ಯಾ ಹಾಗೂ ಆಫ್ರಿಕನ್ನರ ಸಂಘಸಂಸ್ಥೆಗಳು ತೀವ್ರವಾಗಿ ಖಂಡಿಸಿವೆ. ಈಗಾಗಲೇ ಕಾಯ್ದೆಯಾಗಿರುವ ಈ ಮಸೂದೆ ಕರಿಯರ ಪಾಲಿಗೆ ಕರಾಳ ಶಾಸನವಾಗಿದೆ.

ಬ್ರಿಟಿಷ್ ರಾಷ್ಟ್ರೀಯತೆ ಮಸೂದೆ ಪಾರ್ಲಿಮೆಂಟ್ ಮುಂದೆ ಬರುವುದಕ್ಕೆ ಮುಂಚಿನಿಂದಲೇ ಏಷ್ಯಾ ಮತ್ತು ಆಫ್ರಿಕನ್ನರ ಮೇಲೆ ಧಾಳಿ ನಡೆಸಲು ವ್ಯವಸ್ಥಿತ ಪ್ರಯತ್ನ ನಡೆದಿದೆ. 'ರಾಷ್ಟ್ರೀಯ ರಂಗ'ದ ನಾಯಕ ಪೊವೆಲ್ ಜನಾಂಗ ದ್ವೇಷದ ಕಿಚ್ಚನ್ನು ಹಚ್ಚಲು ಮುಂಚೂಣಿಯಲ್ಲಿದ್ದಾನೆ. ಕಪ್ಪು ಕಂದು ವರ್ಣದ ಜನರನ್ನು ಬ್ರಿಟನ್ನಿನಿಂದ ಹೊರದಬ್ಬದಿದ್ದಲ್ಲಿ ಥೇಮ್ಸ್ ನದಿಯು ಕೆಂಪಾಗಿ ಹರಿಯುತ್ತದೆಂದು ಎಚ್ಚರಿಕೆ ನೀಡಿದ್ದಾನೆ. ಅವನ ಎಚ್ಚರಿಕೆ ಕಾರ್ಯರೂಪಕ್ಕಿಳಿದಿದೆ, ವರ್ಣೀಯರ ವಿರುದ್ಧ ಭಯೋತ್ಪಾದಕ ಹಿಂಸೆ ಸೌತ್‌ಹಾಲ್‌ನಿಂದ ಹಿಡಿದು ಏಷ್ಯನ್ನರು, ಆಫ್ರಿಕನ್ನರಿರುವ ಎಲ್ಲಾ ಜಾಗಗಳಿಗೂ ಹಬ್ಬಿದೆ. ಆಧುನಿಕ ಬ್ರಿಟನ್ ಚರಿತ್ರೆಯಲ್ಲೇ ಕಂಡರಿಯದ ಹಿಂಸೆ ದೇಶದ ಉದ್ದಗಲಕ್ಕೂ ಹರಡಿದೆ.

ವರ್ಣೀಯರ ವಿರುದ್ಧ ಧಾಳಿಯಲ್ಲಿ 'ರಾಷ್ಟ್ರೀಯ ರಂಗ'ದ ಬೆಂಬಲಿಗರಾದ ಬೋಳುತಲೆಯ (SKIN HEADS) ಗುಂಪು ಮುಂದಿದೆ. ತಮ್ಮ ಬೋಳಿಸಿದ ತಲೆಯ ಮೇಲೆ ಸ್ವಸ್ತಿಕ್ ಗುರ್ತಿರುವ ಈ ಗುಂಪು ವ್ಯವಸ್ಥಿತವಾಗಿ ಧಾಳಿ ನಡೆಸಿ ಭಯೋತ್ಪಾದನೆ ಮಾಡುತ್ತಿದ್ದಾರೆ. ಸೋಜಿಗದ ಸಂಗತಿ ಎಂದರೆ ಬ್ರಿಟಿಷ್ ಪೋಲೀಸರು ಬಹಿರಂಗವಾಗಿಯೇ ಪಕ್ಷಪಾತಿಗಳಾಗಿ ವರ್ತಿಸುತ್ತಿರುವುದು. ಕರಿಯರು-ಬಿಳಿಯರಿಬ್ಬರೂ ಈ ಹಿಂಸಾಚಾರದಲ್ಲಿ ಸಮಭಾಗಿಗಳೆಂದು ಪ್ರಚಾರ ಮಾಡುತ್ತಿದ್ದಾರೆ. ಕರಿಯರನ್ನೇ ಹೆಚ್ಚು ಸಂಖ್ಯೆಯಲ್ಲಿ ಬಂಧಿಸುವುದು ಮತ್ತು ಆಧುನಿಕ ಸೌಲಭ್ಯಗಳಿದ್ದರೂ ಹಿಂಸಾಚಾರ ನಡೆದ ಬಳಿಕ ಸ್ಥಳಕ್ಕೆ ಪೋಲೀಸರು ಬರುವುದು ಸಾಮಾನ್ಯ ಸಂಗತಿಯಾಗಿದೆ.

ಜನಾಂಗೀಯ ಹಲ್ಲೆಯ ರೂಪದಲ್ಲಿ ತಲೆ ಎತ್ತಿರುವ ಈ ಫ್ಯಾಸಿಸ್ಟ್ ದೌರ್ಜನ್ಯ ಅಂತರರಾಷ್ಟ್ರೀಯ ಫ್ಯಾಸಿಸ್ಟ್ ಸಂಘಟನೆಗಳೊಂದಿಗೆ ಸಂಬಂಧ ಹೊಂದಿದೆ. ಬ್ರಿಟನ್ನಿನ 'ರಾಷ್ಟ್ರೀಯ ರಂಗ'ವು ಅಮೇರಿಕಾದ ನಾಝಿ ಸಂಘಟನೆಯಾದ ಕು, ಕ್ಲುಕ್ಸ್, ಕ್ಲಾನ್ (Ku, Klux, Klan)ನೊಂದಿಗೆ ನಿಕಟ ಸಂಪರ್ಕ ಹೊಂದಿದೆ. ಈ ಹಿಂಸಾಚಾರ ಕೇವಲ ಜನಾಂಗೀಯ ಹಲ್ಲೆಯಾಗಿರದೆ ಬ್ರಿಟನ್ನಿನಲ್ಲಿ ಫ್ಯಾಸಿಸ್ಟರ ವ್ಯವಸ್ಥಿತ ಬೆಳವಣಿಗೆಯ ಪ್ರಯತ್ನವಾಗಿದೆ.

ಬ್ರಿಟನ್ನಿನಲ್ಲಿರುವ ಏಷ್ಯನ್ನರು ಹಾಗೂ ಆಫ್ರಿಕನ್ನರು, ಅದರಲ್ಲೂ ಯುವಜನಾಂಗ ತಾವು ವಲಸೆ ಬಂದವರೆಂದು ಯೋಚಿಸುವುದೇ ಇಲ್ಲ. ಈ ಯುವಜನತೆಯ ಬಹುತೇಕ ಜನ ಬ್ರಿಟನ್ನಿನಲ್ಲೇ ಜನಿಸಿದವರು. ಏಷ್ಯನ್ನರಲ್ಲಿ-ಭಾರತೀಯರು, ಪಾಕಿಸ್ತಾನಿಗಳು, ಬಂಗ್ಲಾದೇಶಿಗಳು-ಇತ್ತೀಚೆಗೆ ಬಂದವರಾಗಿದ್ದು ಸಾಮಾನ್ಯ ಬ್ರಿಟಿಷ್ ಪ್ರಜೆ ಇಚ್ಛೆಪಡದಂತ ಕೀಳುದರ್ಜೆ ಕೆಲಸಗಳನ್ನು ಮಾಡುತ್ತಿದ್ದಾರೆ. ಬ್ರಿಟನ್ನಿನ ಏಷ್ಯನ್ ಯುವಜನತೆ ಸದಾಕಾಲಕ್ಕೂ ಬ್ರಿಟನ್ನಿನಲ್ಲೇ ನೆಲೆಸುವುದಾಗಿ ತಿಳಿದಿದೆ.

(6ನೇ ಪುಟ ನೋಡಿ)

ಕೊಳೆಗೇರಿಗಳು - ವಸತಿ ಸಮಸ್ಯೆಗೆ ಕಾಂಗ್ರೆಸ್(ಐ) ಪರಿಹಾರ

[ಮುಂಬೈ ನಗರದ ಧಾರ್ವಿ ಮೀಸಲು ಕ್ಷೇತ್ರದಿಂದ 1977ರಲ್ಲಿ ಸಿ. ಪಿ. ಐ. (ಎಂ) ಎಂ. ಎಲ್. ಎ. ಕಾಮ್ರೇಡ್ ಸತ್ಯೇಂದ್ರ ಮೋರೆಯವರು ಮರಾಠಿಯಲ್ಲಿ ಬರೆದಿರುವ "ಘರಾಂಚಾ ಪ್ರಶ್ನ" (ಮನೆಗಳ ಪ್ರಶ್ನೆ) ಎಂಬ ಕಿರುಹೊತ್ತಿಗೆಯನ್ನು ಕುರಿತಾದ ಕಾಮ್ರೇಡ್ ಬಿ. ಟಿ. ರಣದಿವೆಯವರ ಲೇಖನದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.]

ಕಾಮ್ರೇಡ್ ಮೋರೆಯವರು ಈ ಪ್ರಬೋಧಕ ಕಿರುಹೊತ್ತಿಗೆಯಲ್ಲಿ ಮುಖ್ಯವಾಗಿ ಮುಂಬೈ ನಗರದ ಪರಿಸ್ಥಿತಿ ಬಗ್ಗೆ ಬರೆದಿದ್ದಾರೆ. ಆದರೆ ಅವರ ತೀರ್ಮಾನಗಳನ್ನು ಹಾಗೂ ವರ್ಣನೆಯನ್ನು ದೇಶದ ಇತರ ಮಹಾನಗರಗಳಿಗೂ, ಕೈಗಾರಿಕಾ ನಗರಗಳಿಗೂ ಅನ್ವಯಿಸಬಹುದು.

ಭಾರತದಲ್ಲಿ ವಸತಿ ಸಮಸ್ಯೆಯು ತೀವ್ರಗೊಳ್ಳುವುದಕ್ಕೂ ಬಂಡವಾಳಶಾಹಿ ಬೆಳೆಯುವುದಕ್ಕೂ ಇರುವ ಸಂಬಂಧವನ್ನು ಲೇಖಕರು ಸರಿಯಾಗಿಯೇ ತೋರಿಸಿಕೊಟ್ಟಿದ್ದಾರೆ. ಬಂಡವಾಳ ವಿನಿಯೋಗ, ಕಾರ್ಖಾನೆಗಳು ಹೆಚ್ಚುತ್ತಾ ಹೋಗಿ ಮುಂಬೈ ನಗರ ಬೆಳೆಯುತ್ತಾ ಹೋದಂತೆ ಭಾರೀ ಬಾಡಿಗೆ ತೆರಲಾಗದ ಕಾರ್ಮಿಕರು ಹಾಗೂ ಕೆಳಮಧ್ಯಮ ವರ್ಗದ ಜನ ನಗರಮಧ್ಯದಿಂದ ನಗರದ ಹೊರವಲಯಕ್ಕೆ, ಅಲ್ಲಿಂದ ಕೊಳಚೆ ಪ್ರದೇಶಗಳಿಗೆ ತಳ್ಳಲ್ಪಟ್ಟರು. 1973ರಲ್ಲಿ ಕಾಂಗ್ರೆಸ್‌ನ 25 ವರ್ಷಗಳ ಆಡಳಿತದ ನಂತರ 90 ಲಕ್ಷ ಜನ ನಗರದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ ಎಂದು ಅಂದಾಜು ಮಾಡಲಾಗಿತ್ತು. ಇದರಲ್ಲಿ ಅರ್ಧದಷ್ಟು ಮುಂಬೈ, ದಿಲ್ಲಿ, ಕಲಕತ್ತೆ ಹಾಗೂ ಮದ್ರಾಸ್ ನಗರಗಳಲ್ಲಿ ವಾಸಿಸುತ್ತಿದ್ದರು.

ಭಾರತದಲ್ಲಿ ಈಗ ವಸತಿಯ ಪ್ರಶ್ನೆಯೆಂದರೆ ಕೇವಲ ಹೆಚ್ಚು ಬಾಡಿಗೆ ಹಾಗೂ ವಿಪರೀತ ಜನದಟ್ಟಣೆಯ ಪ್ರಶ್ನೆಮಾತ್ರವಲ್ಲ. ಅದೀಗ ಬಲವುತದ ಕೊಳೆಗೇರಿವಾಸ ಹಾಗೂ ಹೀನ ಸ್ಥಿತಿಯಲ್ಲಿರುವ ಮನೆಗಳಲ್ಲಿ ವಾಸದ ಪ್ರಶ್ನೆಯಾಗಿದೆ. ಎಲ್ಲೆಲ್ಲಿ ಆಧುನಿಕ ಕೈಗಾರಿಕೆ ಹರಡಿದೆಯೋ ಅಲ್ಲೆಲ್ಲಾ ಈ ಸಮಸ್ಯೆಯು ತಲುಪಿದೆ. ಮಹಾರಾಷ್ಟ್ರದ ಗ್ರಾಮಾಂತರ ಗುಡಿಸಲು ಪ್ರದೇಶಗಳು ಹೆಚ್ಚುತ್ತಿವೆ ಎಂದು ಲೇಖಕರು ಹೇಳಿದ್ದಾರೆ.

ಇಲ್ಲಿ ಇನ್ನೂ ಒಂದು ವಿಷಯವನ್ನು ಸೇರಿಸಬಹುದು. ರಾಷ್ಟ್ರೀಕೃತ ಕಲ್ಲಿದ್ದಲು ಕೈಗಾರಿಕೆಯ ಕಾರ್ಮಿಕರು ಅತೀ ನಿಕೃಷ್ಟ ವಸತಿ ಸಮಸ್ಯೆಯನ್ನೆದುರಿಸುತ್ತಿದ್ದಾರೆ. ಒಂದು ಸರಕಾರೀ ಸಮಿತಿಯ ವರದಿ ಪ್ರಕಾರವೇ ತಕ್ಕಮಟ್ಟಿನ ವಾಸಯೋಗ್ಯ ಸ್ಥಿತಿಯಲ್ಲಿರುವ ವಸತಿಗಳನ್ನು ಕೇವಲ ಶೇಕಡ 15 ಕಾರ್ಮಿಕರಿಗೆ ಮಾತ್ರ ಒದಗಿಸಲು ಸಾಧ್ಯವಾಗಿದೆ.

ಬಡವರಿಗೆ ಸಾವಿನ ಬಲೆ

ಕಮ್ಮಿ-ಬಾಡಿಗೆಯ ಮನೆಗಳೆಂದು ಒದಗಿಸಲಾಗುವ ವಸತಿಗಳು ಅವುಗಳ ಮಾಲೀಕರಿಗೆ ಲಾಭದಾಯಕವಾಗಿರುವುದಿಲ್ಲ. ಆದ್ದರಿಂದ ಅದರ ಮೇಲ್ವಿಚಾರಣೆ ಬಗ್ಗೆ ನಿಗಾ ವಹಿಸಲಾಗುವುದಿಲ್ಲ. ಪರಿಣಾಮವಾಗಿ ಮುಂಬೈಯಂತಹ ನಗರಗಳಲ್ಲಿ ಅವು ಬಡವರಿಗೆ ಸಾವಿನ ಬಲೆಗಳಾಗಿಬಿಟ್ಟಿವೆ. ಪ್ರತಿವರ್ಷ ಕನಿಷ್ಠ ಒಂದುಸಾವಿರ ಜನ ಮನೆಕುಸಿತಗಳಿಂದಾಗಿ ಗಾಯಗೊಳ್ಳುತ್ತಾರೆ. ಮನೆ ದುರಸ್ತಿಗಾಗಿ ಜನರಿಂದ ವಿಶೇಷ ಕರವನ್ನು ವಸೂಲಿ ಮಾಡಿದರೂ ಮನೆಗಳ ದುರಸ್ತಿಯ ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲ. ಅಂತುಲೆಯವರ ಆರು ತಿಂಗಳ ಆಡಳಿತ ಕಾಲದಲ್ಲೇ ನೂರಕ್ಕಿಂತಲೂ ಹೆಚ್ಚು ಮನೆಗಳು ಮುಂಬೈಯಲ್ಲಿ ಕುಸಿದುಬಿದ್ದಿವೆ. ಇತ್ತೀಚಿನ ಅಂಕಿ-ಸಂಖ್ಯೆ ಪ್ರಕಾರ ಮುಂಬೈಯ 40 ಲಕ್ಷ ಕೊಳೆಗೇರಿ ನಿವಾಸಿಗಳಲ್ಲಿ 20 ಲಕ್ಷ ಜನಕ್ಕೆ ಮಾತ್ರ ಕೆಲವು ಪ್ರಾಥಮಿಕ ಸೌಲಭ್ಯಗಳನ್ನು ಒದಗಿಸಲು ಸರಕಾರಕ್ಕೆ ಸಾಧ್ಯವಾಗಿದೆ.

ಸರಕಾರ ಡಂಗುರ ಹೊಡಿಸಿದ ಅಗ್ಗದ ವಸತಿ ಯೋಜನೆಗಳೆಲ್ಲಾ ಸಾಧಿಸಿದ್ದು ಬರೀ ಸೊನ್ನೆ. ರಾಜ್ಯ ಸರಕಾರದ ವಸತಿ ಮಂಡಳಿ ಅಥವಾ ಹೌಸಿಂಗ್ ಬೋರ್ಡ್ ಭ್ರಷ್ಟಾಚಾರದ ಗೂಡುಗಳಾಗಿ ಜನಸಾಮಾನ್ಯರ ವಸತಿ ಸಮಸ್ಯೆಗೆ ಅದರಿಂದ ಏನೂ ಪರಿಹಾರ ಸಿಗಲಿಲ್ಲ. ಹೌಸಿಂಗ್ ಬೋರ್ಡ್‌ನ ಮನೆಗಳು ಆಗಲೇ ಜೀರ್ಣವಾದಂತೆ ಕಾಣುತ್ತಿವೆ. ಅವುಗಳ ನಿವಾಸಿಗಳ ಭದ್ರತೆಗೆ ಅಪಾಯ ತಂದೊಡ್ಡಿವೆ.

ಹೀಗಿರುವಾಗ ಕೊಳೆಗೇರಿಗಳಿಗೆ ಹೋಗುವುದು ಬಿಟ್ಟು, ಜನಸಾಮಾನ್ಯರು ಬೇರೇನು ತಾನೇ ಮಾಡಲು ಸಾಧ್ಯ?

ಸಮಸ್ಯೆಗೆ ಸರಕಾರದ ಪರಿಹಾರ

ತುರ್ತುಪರಿಸ್ಥಿತಿ ಸಮಯದಲ್ಲಿ ಕಾಂಗ್ರೆಸ್ ಸರಕಾರ ನಗರ ಭೂಮಾಲಕತ್ವದ ಮೇಲೆ ಮಿತಿ ಹೇರಿ ಭೂಮಿಯನ್ನು ಬಡವರ ವಸತಿಗಾಗಿ ಉಪಯೋಗಿಸುವ ನಾಟಕವಾಡಿತು. ವಾಸ್ತವವಾಗಿ ಈ ರೀತಿ ಬಡವರ ವಸತಿಗಾಗಿ ಪ್ರಯತ್ನ ನಡೆಯುಬೇಕೆಂಬುದರ ಅರ್ಥ ಸರಕಾರ ವಸತಿ ಸಮಸ್ಯೆ ಪರಿಹರಿಸಲು ಕಾತುರವಾಗಿದೆಯೆಂದಾಗುತ್ತದೆ. ಆದರೆ ಸರಕಾರಕ್ಕೆ ಈ ಕಾತುರ ಏಕೆ ಬೇಕು? ಕೊಳೆಗೇರಿಗಳ ಕಮ್ಮಿ ಖರ್ಚಿನ ಮನೆಗಳು ಬಂಡವಾಳಶಾಹೀ ವ್ಯವಸ್ಥೆಗೆ ಬೇರೆ ಯಾವುದಕ್ಕಿಂತಲೂ ಹೆಚ್ಚು ಸರಿಹೊಂದುತ್ತವೆ. ಉತ್ತಮ ಹಾಗೂ ನಿರ್ಮಲ ವಸತಿ ಕಲ್ಪಿಸಬೇಕಾದರೆ ಬಂಡವಾಳಶಾಹಿಗಳಿಗೆ ಹಾಗೂ ಲಾಭಕೋರರಿಗೆ ತೊಂದರೆಯಾಗದಂತೆ ಅದನ್ನು ಒದಗಿಸಲು ಸಾಧ್ಯವಿಲ್ಲ. ಖಾಲಿಜಾಗಗಳಲ್ಲಿ ತುಕ್ಕುಹಿಡಿದ ತಗಡುಗಳು ಹಾಗೂ ಮಣ್ಣಿನ ಗೋಡೆಗಳ ಗೂಡುಗಳಿಂದ ಕೂಡಿದ ಕೊಳೆಗೇರಿಗಳಿಗಾಗಿ ಬಂಡವಾಳಶಾಹಿಗಳು ಏನೂ ಖರ್ಚುಮಾಡಬೇಕಾಗಿಲ್ಲ.

ಸದ್ಯದ ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯ ಚೌಕಟ್ಟಿನೊಳಗೆ ವಸತಿ ಸಮಸ್ಯೆಯ ಪರಿಹಾರ ಸಾಧ್ಯವಿಲ್ಲ ಎಂದು ಲೇಖಕರಿಗೆ ತಿಳಿದಿದೆ. ಸರಕಾರ ಲಕ್ಷಗಟ್ಟಲೆ ಜನರನ್ನು ಕೊಳಗೇರಿಗಳಿಗೆ ನೂಕಿ ವಸತಿ ಸಮಸ್ಯೆ ಪರಿಹರಿಸಲು ಪ್ರಯತ್ನಿಸುವಂತೆ ಕಾಣುತ್ತದೆ.

ತ್ವರಿತ ದರಿದ್ರೀಕರಣ

ಲೇಖಕರು ಎರಡು ಮಹತ್ವದ ವಿಷಯಗಳನ್ನು ಗಮನಿಸಿದ್ದಾರೆ. ಒಂದು, ನಾವು ಸಾಮಾನ್ಯವಾಗಿ ನಿರೀಕ್ಷಿಸದ ಜಾತಿ ಹಾಗೂ ವಿಭಾಗಗಳ ಜನರೂ ಕೊಳೆಗೇರಿಯ ನಿವಾಸಿಗಳಿದ್ದಾರೆ. ಅಂದರೆ ಬಡತನ ಭಾರತದಲ್ಲಿ

ಬಿ. ಟಿ. ರಣದಿವೆ

ಹರಡುತ್ತಿದೆ ಹಾಗೂ ಅದು ಎಲ್ಲಾ ಜಾತಿಗಳ ಕೆಳಹಂತದ ವಿಭಾಗಗಳಿಗೆ ತೀವ್ರವಾಗಿ ಹರಡುತ್ತಿದೆಯೆಂದು ಇದು ಸ್ಪಷ್ಟವಾಗಿಸುತ್ತದೆ. ಎರಡನೇಯದು, ಬಡತನ ಎಲ್ಲಾ ಜಾತಿಗಳಿಗೂ ಹರಡುತ್ತಿದ್ದರೂ ಕೊಳೆಗೇರಿಗಳಲ್ಲೂ ಜಾತಿ ಪ್ರಜ್ಞೆ ಬಿಟ್ಟುಹೋಗಿಲ್ಲ. ಇದು ಹಳ್ಳಿಯ ಅರೆಪಾಳೆಯಗಾರೀ ಸ್ಥಿತಿ ಮತ್ತು ಸಂಪ್ರದಾಯಗಳ ಆಳಪ್ರಭಾವವನ್ನು ತೋರಿಸುತ್ತದೆ.

ನೂರಾಇಪ್ಪತ್ತೈದು ವರ್ಷಗಳ ಹಿಂದೆ ಫ್ರೆಡರಿಕ್ ಎಂಗೆಲ್ಸ್ ಇಂಗ್ಲೆಂಡಿನ ಕೊಳೆಗೇರಿಗಳನ್ನು ವರ್ಣಿಸಿದ್ದರು. ಆ ವರ್ಣನೆ ಕಾಂಗ್ರೆಸ್(ಐ)ನ ದಯಾಮಯ ಆಳ್ವಿಕೆಯಲ್ಲಿನ ಈಗಿನ ಭಾರತದ ಕೊಳೆಗೇರಿಗಳಿಗೂ ಅನ್ವಯಿಸುತ್ತದೆ. ಅವರು ಹೀಗೆಂದಿದ್ದರು: "ಪ್ರತಿಯೊಂದು ಮಹಾನಗರದಲ್ಲೂ ಒಂದು ಅಥವಾ ಅದಕ್ಕಿಂತ ಹೆಚ್ಚು ಕೊಳೆಗೇರಿಗಳಿರುತ್ತವೆ. ಇಲ್ಲಿ ಕಾರ್ಮಿಕ ವರ್ಗವನ್ನು ಕಿಕ್ಕಿರಿದು ತುಂಬಿಸಲಾಗಿರುತ್ತದೆ. ಶ್ರೀಮಂತರ ಅರಮನೆಗಳ ಹತ್ತಿರವೇ ಗುಪ್ತ ಗಣಿಗಳಲ್ಲಿ ಬಡತನ ವಾಸಿಸುತ್ತದೆ ಎಂಬುದು ನಿಜ. ಆದರೆ ಸಾಮಾನ್ಯವಾಗಿ ಅದಕ್ಕೆಂದೇ ಒಂದು ಪ್ರತ್ಯೇಕ ಪ್ರದೇಶವನ್ನು ಕೊಡಮಾಡಲಾಗುತ್ತದೆ. ಅಲ್ಲಿ ಆನಂದದಿಂದಿರುವ ವರ್ಗಗಳ ದೃಷ್ಟಿಕ್ಷೇತ್ರದಿಂದ ದೂರವಾಗಿ ತನಗೆಬೇಕಾದಂತೆ ಜೀವನದ ಹೋರಾಟ ಅದು ನಡೆಸಬಹುದು. ಇಂಗ್ಲೆಂಡಿನ ಎಲ್ಲಾ ಮಹಾನಗರಗಳಲ್ಲಿ ಈ ಕೊಳೆಗೇರಿಗಳು ಸಮನಾಗಿಯೇ ಬೆಳೆದಿವೆ. ರಸ್ತೆಗಳು ಸಾಮಾನ್ಯವಾಗಿ ಕಚ್ಚಾ. ಕೊಳಕಾಗಿದ್ದು, ಕಾಯಿಪಲ್ಯೆ ಚೂರುಗಳು ಹಾಗೂ ಪ್ರಾಣಿಗಳ ಮಲಮೂತ್ರಗಳಿಂದ ತುಂಬಿದ್ದು, ಗಟಾರಗಳಿಲ್ಲದೆ ದುರ್ವಾಸನೆಯ ನೀರು ಮಡುಗಟ್ಟಿ ನಿಂತಿರುತ್ತದೆ... ಹಲವು ಮಾನವ ಜೀವಿಗಳು ಈ ಸಣ್ಣ ಜಾಗದಲ್ಲಿ ವಾಸಿಸುವುದರಿಂದ ಈ ಶ್ರಮಜೀವಿಗಳ ಕೇರಿಗಳ ವಾತಾವರಣ ಹೇಗಿರಬಹುದೆಂದು ಊಹಿಸಿಕೊಳ್ಳಬಹುದು...ಇಲ್ಲಿ ಬಡವರಲ್ಲಿ ಬಡವರು, ನಿಕೃಷ್ಟ ಸಂಬಳ ಪಡೆಯುವ ಕಾರ್ಮಿಕರು, ಕಳ್ಳರು, ಸೂಳೆಗಾರಿಕೆಗೆ ಬಲಿಯಾದವರು ಎಲ್ಲಾ ವಿವೇಚನೆಯಿಲ್ಲದೆ ಒಂದೆಡೆ ತಳ್ಳಲ್ಪಟ್ಟಿರುತ್ತಾರೆ..." ಒಂದೇ ವ್ಯತ್ಯಾಸವೆಂದರೆ ಸದ್ಯದ ಭಾರತ ದೇಶದಲ್ಲಿ ಸ್ವಲ್ಪ ಉತ್ತಮ ವೇತನ ಪಡೆಯುವ ಕಾರ್ಮಿಕರೂ ಕೊಳೆಗೇರಿಗಳಿಗೆ ತಳ್ಳಲ್ಪಟ್ಟಿದ್ದಾರೆ. ಭಾರತದಲ್ಲಿ ಪ್ರತಿವರ್ಷ ಲಕ್ಷಗಟ್ಟಲೆ ಉತ್ತಮ ಮನೆಗಳು ಬೇಕಾಗುತ್ತವೆ. ಆದರೆ ಈ ಬಗ್ಗೆ ಯೋಚಿಸುವವರಾದರೂ ಯಾರು?

ಯೋಜನೆಗಳು ಏನು ಹೇಳುತ್ತವೆ?

ಆರನೇ ಪಂಚವಾರ್ಷಿಕ ಯೋಜನೆಯ ದಸ್ತಾವೇಜಿನಲ್ಲಿ ಇದುವರೆಗಿನ ಯೋಜನೆಗಳಲ್ಲಿ ವಸತಿ ಸಮಸ್ಯೆಗೆ ಹರಿಸಿದ ಗಮನವೆಷ್ಟೆಂಬುದನ್ನು ಪರಿಶೀಲಿಸಲಾಗಿದೆ. ಇದುವರೆಗೆ ವರ್ಷಕ್ಕೆ ಸುಮಾರು 22,000 ಮನೆಗಳನ್ನು ಕಟ್ಟಿಸಲಾಗುತ್ತಿದೆ. ಕೇವಲ ಮುಂಬೈ ನಗರವೊಂದರಲ್ಲೇ 40ಲಕ್ಷ ಕೊಳೆಗೇರಿ ನಿವಾಸಿ ಕುಟುಂಬಗಳಿರುವ ದೇಶಕ್ಕೆ ಈ ಸಂಖ್ಯೆ ತೀರಾ ಹಾಸ್ಯಾಸ್ಪದವೆನಿಸುತ್ತದೆ. ಗ್ರಾಮಾಂತರ ಕ್ಷೇತ್ರದಲ್ಲಿ 1.45ಕೋಟಿ ವಸತಿಗಳ ಅಗತ್ಯವಿದ್ದರೆ ಅದರಲ್ಲಿ 5ಲಕ್ಷ ಮಂದಿಗೆ ಮಾತ್ರ ವಸತಿಕಲ್ಪಿಸಲಾಗಿದೆ. ಮುಂದಿನ 5 ವರ್ಷಗಳಲ್ಲಿ 36ಲಕ್ಷ ಕುಟುಂಬಗಳಿಗೆ ವಸತಿ ಕಲ್ಪಿಸುವ ಯೋಜನೆಯಿದೆ. ಅಂದರೆ 5 ವರ್ಷಗಳ ನಂತರವೂ ಗ್ರಾಮಾಂತರ ವಸತಿಹೀನ ಕುಟುಂಬಗಳ ಸಂಖ್ಯೆ 1ಕೋಟಿಗಿಂತ ಹೆಚ್ಚೇ ಇರುತ್ತದೆ.

ಆರನೇ ಯೋಜನೆಯಲ್ಲಿ "ನಗರ ಕ್ಷೇತ್ರದಲ್ಲಿನ ಹೊಸ ವಸತಿಗಳಲ್ಲಿ ಬಹುಳಾಂಶವನ್ನು ಖಾಸಗೀ ಮೂಲಗಳೇ ನಿರ್ಮಿಸಬೇಕಾಗುತ್ತದೆ"ಯಂತೆ. ಅಂದರೆ ಸಮಸ್ಯೆ ಹತ್ತು ಪಟ್ಟು ಹೆಚ್ಚಲಿದೆ. 1985ರಲ್ಲಿ ವಸತಿ ಅಗತ್ಯವಾಗಿರುವ ನಗರ ನಿವಾಸಿಗಳ ಸಂಖ್ಯೆ 3 ಕೋಟಿ 31ಲಕ್ಷ ಎಂದು ಅಂದಾಜು ಮಾಡಲಾಗಿದ್ದು ಕಾಂಗ್ರೆಸ್(ಐ) ಸಮಾಜವಾದೀ ಯೋಜನಾಕಾರರು ನಿರ್ಮಿಸಲಿರುವುದು 22 ಲಕ್ಷ ಮನೆಗಳು ಮಾತ್ರ. ಉಳಿದವರನ್ನು ಖಾಸಗೀ ವಲಯದ ತಿಮಿಂಗಿಲಗಳ ಬಾಯಿಗೆಸೆಯಲಾಗುತ್ತದೆ. ಈ ಹುಚ್ಚುತನದಲ್ಲೂ ಒಂದು ವಿಧಾನವಿದೆ. ಯೋಜನಾಕಾರರಿಗೆ ಗೊತ್ತು-ಖಾಸಗೀಯವರು ಬಡವರಿಗೆ ವಸತಿ ಕಲ್ಪಿಸುವುದಿಲ್ಲ ಎಂದು. ಅಂದರೆ ಕೊಳೆಗೇರಿಗಳ ವಸತಿ ಸಮಸ್ಯೆಯನ್ನು ಪರಿಹರಿಸುವ ಒಂದು ದಾರಿ ಎಂದು ಯೋಜನಾಕಾರರೇ ಅಧಿಕೃತವಾಗಿ ಘೋಷಿಸಿದಂತಾಯಿತು. ಇದರಿಂದಾಗಿಯೇ ಅವರಿಗೆ ಕೊಳೆಗೇರಿಗಳಲ್ಲಿ ಹೊಸ ಗುಣಗಳು ಕಾಣಲಾರಂಭಿಸಿವೆ.

ಈ ಕಾಂಗ್ರೆಸ್(ಐ) ಸಮಾಜವಾದಕ್ಕೀಗ ಕೊಳೆಗೇರಿಯನ್ನು ನಿರ್ಮೂಲ ಮಾಡಿ ಅದರ ಜಾಗದಲ್ಲಿ ಮಾನವ ಯೋಗ್ಯ ವಸತಿ ಕಲ್ಪಿಸುವುದು ಸ್ವೀಕಾರ್ಯವಲ್ಲ. ಸಾರ್ವಜನಿಕ ವಲಯ ಇನ್ನು ಮುಂದೆ ಕೊಳೆಗೇರಿಗಳನ್ನು ಸುಧಾರಿಸುವುದಕ್ಕೆ ಮಾತ್ರ ಖರ್ಚು ಮಾಡಬೇಕೆಂದು ಯೋಜನಾಕಾರರು ಹೇಳುತ್ತಾರೆ. ಯಾಕೆಂದರೆ ಕೊಳೆಗೇರಿಗಳನ್ನು ತೆಗೆದು ಉತ್ತಮ ವಸತಿ ಕಲ್ಪಿಸುವಾಗ ಅಲ್ಲಿನ ನಿವಾಸಿಗಳಿಗೆ ಬಹಳ ತೊಂದರೆಯಾಗುತ್ತದೆ. ಅಲ್ಲದೆ ಕೊಳೆಗೇರಿಗಳಲ್ಲಿರುವ ವಸತಿ ಬಂಡವಾಳ ಅದೆಷ್ಟೇ ಕಮ್ಮಿಯಾದರೂ ಹಾಳಾಗುತ್ತದಂತೆ. ಮಾತ್ರವಲ್ಲ, ಒಂದು ಕೊಳೆಗೇರಿ ಕೊಳೆಗೇರಿಯೆನಿಸುವುದು ಅಲ್ಲಿರುವ ಗೂಡುಗಳಿಂದಾಗಿ ಮನೆಗಳಿಂದ ಅಲ್ಲ; ಬದಲಾಗಿ ಅಲ್ಲಿನ ವಾತಾವರಣದಿಂದಾಗಿ. ಆದ್ದರಿಂದ ಕೆಲವು ಸೌಲಭ್ಯಗಳನ್ನು ಕಲ್ಪಿಸುವುದರ ಕಡೆಗೆ ಮಾತ್ರ ಗಮನ ಕೊಡುವುದೊಳ್ಳೆಯದು ಎಂದು ಈ ಯೋಜನಾಕಾರರ ಅಭಿಪ್ರಾಯ. ಹೊಸವಸತಿ ಕಲ್ಪಿಸುವಾಗ ಕೊಳೆಗೇರಿ ನಿವಾಸಿಗಳಿಗೆ ತೊಂದರೆಯಾಗುವುದು ನಿಜ. ಅಲ್ಲದೆ ಕೊಳೆಗೇರಿಗಳಿಗೆ ಕೆಲವು ಸೌಲಭ್ಯಗಳನ್ನು ಒದಗಿಸುವುದಗತ್ಯ. ಆದರೆ ಇದನ್ನೇ ನೆಪಮಾಡಿ ಹೊಸವಸತಿ ಕಲ್ಪಿಸುವ ಕಾರ್ಯಕ್ರಮವನ್ನೇ ಕೈಬಿಟ್ಟು ಕೇವಲ ಅಮಾನವೀಯ ವಾತಾವರಣವಿರುವ ಕೊಳೆಗೇರಿಗಳನ್ನು ಸುಧಾರಿಸುವ ಮಾತನ್ನಾಡುವುದು, ತುಕ್ಕುಹಿಡಿದ ಕಬ್ಬಿಣದ ತಗಡುಗಳ, ಕಿಟಿಕಿಗಳಿಲ್ಲದ, ಬೇಸಗೆಯಲ್ಲಿ ಕಾದ ಕುಲುಮೆಯಂತಿರುವ ಗೂಡುಗಳೆಲ್ಲವನ್ನು ಉತ್ತಮ ಮನೆಗಳೆಂದು ಹೇಳುವುದು-ಇದೇ ಏನು ಬಡವರ ವಸತಿ ಸಮಸ್ಯೆಗೆ ಪರಿಹಾರ? ಕೊಳೆಗೇರಿಗಳನ್ನು ಮುಂದುವರೆಸಲು ಹೂಡಿರುವ ನೀಚ ಉಪಾಯವಿದು. ವಸತಿ ಸಮಸ್ಯೆಯ ಪರಿಹಾರಕ್ಕೆಂದು ಕೊಳೆಗೇರಿಗಳಿಗೆ ಅನುವು ಮಾಡಿಕೊಡುವುದು ಇದೇ ಯೋಜನಾ ಆಯೋಗದ ಮನಸ್ಸಿನಲ್ಲಿರುವ ಕಾನೂನುಬದ್ಧ ಮಾರ್ಗ!

O

ನಮ್ಮ ಸಮಸ್ಯೆಗಳಿಗೆ ಪರಿಹಾರ ಒದಗಿಸಿ

–ಎನ್.ಕೆ. ಉಪಾಧ್ಯಾಯ

ತಮ್ಮ ಹಲವು ಜೀವಂತ ಸಮಸ್ಯೆಗಳ ಪರಿಹಾರಕ್ಕಾಗಿ ಹೋದವರ್ಷ ಮಲಪ್ರಭಾ ಆಯಕಟ್ಟು ಪ್ರದೇಶದ ರೈತರು ಹೋರಾಡಿ, ಇಬ್ಬರನ್ನು ಬಲಿಕೊಟ್ಟು, ಅವರ ಹೋರಾಟವನ್ನು ಬೆಂಬಲಿಸಿ, ಪೋಲೀಸರ ದಬ್ಬಾಳಿಕೆಯನ್ನು ಖಂಡಿಸಲು ನಡೆದ ಹೋರಾಟದಲ್ಲಿ 52ಕ್ಕಿಂತಲೂ ಹೆಚ್ಚು ಜನ ಪೋಲೀಸರ ಗೋಲೀಬಾರಿಗೆ ತುತ್ತಾದ ಪರಿಣಾಮವಾಗಿ ಅಭಿವೃದ್ಧಿಕರ, 5 ಹೆಚ್. ಪಿ. ಪಂಪ್‌ಗಳಿಗೆ ವಿದ್ಯುಶ್ಶಕ್ತಿ ಮಾಫಿಯಾಗಿ ಕಬ್ಬಿನ ಬೆಳೆಗೆ ಸ್ವಲ್ಪ ಹೆಚ್ಚಿನ ಬೆಲೆ ಸಿಕ್ಕಿದೆ ನಿಜ. ಆದರೆ ಕಾಲುವೆಗಳ ರಿಪೇರಿ, ಸರಿಯಾಗಿ ನೀರು ಪೂರೈಕೆ, ರಸಾಯನಿಕ ಗೊಬ್ಬರದ ಬೆಲೆ, ಲೆವಿ, ಲೆವಿಕೊಡದಿದ್ದರೆ ದಂಡ ಮೊದಲಾದ ಮಹತ್ತರವಾದ ಪ್ರಶ್ನೆಗಳು ಪರಿಹಾರ ಕಾಣದೆ ಉಳಿದಿವೆ.

ನಾನು ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಜಿಲ್ಲಾ ಕಾರ್ಯದರ್ಶಿಯಾದ ಚಂದ್ರಶೇಖರ ಬಾಳೆಯವರು ರೈತರ ಸಮಸ್ಯೆ ಅಭ್ಯಾಸ ಮಾಡಲು ರಾಯಚೂರು ಜಿಲ್ಲೆಯ ತುಂಗಭದ್ರಾ ಆಯಕಟ್ಟು ಪ್ರದೇಶ ಹಾಗೂ ಒಣ ಪ್ರದೇಶಗಳಲ್ಲಿ ಒಂದು ವಾರ ಸಂಚಾರಮಾಡಿದಾಗ ನಾವು ಅನುಭವಿಸಿದ ಅನುಭವಗಳು ಹಲವಾರು.

ರಸಾಯನಿಕ ಗೊಬ್ಬರ, ಚಿಮಿಣಿ ಎಣ್ಣೆ, ಪೆಟ್ರೋಲ್, ಡೀಜಲ್‌ಗಳ ಬೆಲೆಗಳಲ್ಲಿ ಹೆಚ್ಚಳ, ಜೊತೆಯಲ್ಲೇ 600 ಕೋಟಿ ರೂಪಾಯಿ ಬೆಲೆಯ ಗೋಧಿಯನ್ನು ಅಮೇರಿಕದಿಂದ ಆಮದು ಮಾಡಲಾಗುವ ಸರಕಾರದ ಸುದ್ದಿ ಪತ್ರಿಕೆಗಳಲ್ಲಿ ಪ್ರಚಾರದಲ್ಲಿದ್ದಾಗಲೇ ಓದಿದೆವು. ಬೆಲೆ ಹೆಚ್ಚಳದ ಸುದ್ದಿ ಕೇಳಿದ ಕೂಡಲೇ ರಸಾಯನಿಕ ಗೊಬ್ಬರ ಮಾರಾಟ ಮಾಡಲಾರದಾದ ವ್ಯಾಪಾರಸ್ಥರ ಅಂಗಡಿಗಳ ತುಂಬ ರೈತರೆಲ್ಲ ಕಂಗಾಲಾಗಿ ನಿಟ್ಟುಸಿರು ಬಿಡುತ್ತಿದ್ದುದನ್ನೂ ಕಂಡೆವು. ಮುಂಗಾರಿ ಬೆಳೆಗೆ ಆ ವಾರದಲ್ಲೇ ಗೊಬ್ಬರದ ಅವಶ್ಯಕತೆಯಿದ್ದು, ಅದು ಸಿಗಲಾರದಾಗ "ನಮ್ಮ ಪೈರಿನ ಗತಿಯೇನು ?" ಎಂಬ ಪ್ರಶ್ನಾರ್ಥಕ ಚಿನ್ಹೆ ಗಾಬರಿಗೊಂಡ ರೈತರ ಮುಖಗಳಲ್ಲಿ ಎದ್ದು ಕಾಣುತ್ತಿತ್ತು. "ಅಮೇರಿಕದಿಂದ ಗೋಧಿ ಆಮದುಮಾಡಲು 600 ಕೋಟಿ ರೂಪಾಯಿ ಖರ್ಚು ಮಾಡುವ ಈ ಸರಕಾರ, ಅದರ ಅರ್ಧದಷ್ಟು ಹಣವನ್ನು ರೈತರ ಹಿತಕ್ಕಾಗಿ, ಗೊಬ್ಬರವನ್ನು ಅಗ್ಗದರದಲ್ಲಿ ಒದಗಿಸಲು, ನೀರು ಸರಿಯಾಗಿ ಪೂರೈಸಲು, ಸರಿಯಾದ ಬೆಲೆ ನಿಗದಿ ಮಾಡಲು–ಖರ್ಚು ಮಾಡಿದ್ದಾದರೆ, ನಾವೂ ಬದುಕಬಹುದು, ದೇಶವೂ ಸಂಪನ್ಮೂಲವಾಗಬಹುದಲ್ಲ" ಎಂಬ ಉದ್ಗಾರವನ್ನು ಹಲವಾರು ರೈತರ ಬಾಯಿಯಿಂದ ಕೇಳಿದೆವು. ನಮ್ಮ ಅಭಿಪ್ರಾಯವೂ ಅದೇ ಆಗಿತ್ತು. ಆದರೆ ಗುತ್ತೇದಾರಿ ಬಂಡವಾಳದಾರರ ಇಂದಿರಾ ಸರಕಾರದ ಅಭಿಪ್ರಾಯವೇ ಬೇರೆಯಲ್ಲವೇ ?

ಲೆವಿ ಪ್ರಶ್ನೆ

ಬಹಿರಂಗ ಮಾರುಕಟ್ಟೆಯ ಕೊಂಡು ಕೊಳ್ಳುವ ಬೆಲೆಗೂ ಸರಕಾರ ಲೆವಿ ಮೂಲಕ ಕೊಳ್ಳುವ ಧಾರಣೆಗೂ ಅಜಗಜಾಂತರ. ರೈತನು ಬೆಳೆಯುವ ಬೆಳೆಗಳಿಗೆ ಯೋಗ್ಯಬೆಲೆ ಸಿಗಬೇಕೆಂದು ರೈತಸಂಘ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹೋರಾಡುತ್ತ ಬಂದಿದೆ. ಪಡಿತರ ಪದ್ಧತಿಗೊಳಪಟ್ಟ ನಗರವಾಸಿಗಳಿಗೆ ಪೂರೈಸುವ ನೆಪದಿಂದ ರೈತರಿಗೆ ನಷ್ಟ ಉಂಟುಮಾಡಿ ಸರಕಾರ ಲೆವಿ ವಸೂಲಿಮಾಡುತ್ತಿದೆ. ಲೆವಿವಸೂಲಿಗೆ ಬರುವ ಮೇಲಧಿಕಾರಿಗಳು "ಲಂಚದ ಗುರಿ" ಇಟ್ಟುಕೊಂಡೇ ಬರುತ್ತಾರಂತೆ. ಗಂಗಾವತಿಗೆ ಬಂದ ಅಧಿಕಾರಿಯು "ಗುರಿ" ಎರಡು ಲಕ್ಷ ರೂಪಾಯಿ. ಆ ಗುರಿ ಸಾಧಿಸುವ ತನಕ ಅವರು ತಮ್ಮ ಮೆಟ್ಟು ಕಿತ್ತುವುದಿಲ್ಲವಂತೆ. ತಮ್ಮ ಗುರಿ ಸಾಧಿಸಲು ರೈತರು ಸಹಕರಿಸದಿದ್ದರೆ, ಸರಕಾರ ನಿರ್ಣಯಿಸಿದ ಲೆವಿ ಪ್ರಮಾಣ ಬಿಟ್ಟು ಮನಬಂದಂತೆ ವಸೂಲಿ ಮಾಡಲು "ಹುಕುಂ" ಕೊಡಲಾಗುವುದು. ನಿರಾಕರಿಸಿದವರ ಮೇಲೆ ಅತಿ ಭಾರವಾದ "ಪೆನಾಲ್ಟಿ" (ದಂಡ) ವಿಧಿಸಲಾಗುವುದು. ಗುಂಡೂರಾವ್ ಸರಕಾರದ ರೈತಪರ ನೀತಿಯಿದು.

ನೀರು ಪೂರೈಕೆ

ಕಾಲುವೆ ರಿಪೇರಿ ಸಲುವಾಗಿ ಒಂದು ವರ್ಷದಲ್ಲಿ ಎರಡು ತಿಂಗಳು ರೈತರಿಗೆ ನೀರು ಬಂದು ಮಾಡಲಾಗುತ್ತಿದೆ. ಆದರೆ ಕಳೆದ 10-15 ವರ್ಷಗಳಿಂದಲೂ ಕಾಲುವೆಗಳ ರಿಪೇರಿ ನಡೆದೇ ಇಲ್ಲೆಂದು ನಾವು ಪ್ರತ್ಯಕ್ಷ ದರ್ಶಿಗಳಾಗಿ ಸಾಕ್ಷ್ಯ ನುಡಿಯಬಹುದು. ಹೋದವರ್ಷ ಕಾಲುವೆ ರಿಪೇರಿ ಇಲ್ಲದ ಕಾರಣ ಸಂಧಿಕಾಲದಲ್ಲೇ ಹೊಲಗಳಿಗೆ ನೀರು ಪೂರೈಕೆಯಾಗದೆ ಬೆಳೆ ಒಣಗಿದ ಸಂಗತಿ ಎಲ್ಲರಿಗೂ ಗೊತ್ತು. ಪ್ರತಿ ವರ್ಷ ಈ ಗಂಡಾಂತರ ಎದುರಿಸಬೇಕಾಗಿದೆ. ಈ ಕಾರಣದಿಂದಾಗಿ ಕಾಲುವೆ ಕೊನೆಯಲ್ಲಿದ್ದವರಿಗಂತೂ ಒಂದು ಹನಿ ಕೂಡ ನೀರೇ ಸಿಗುತ್ತಿಲ್ಲ. ಅಧಿಕಾರಿಗಳು ಮೇಲ್ವಿಚಾರಣೆಗಾಗಿ ಮಾಡುವ ಖರ್ಚನ್ನು ಕಾಲುವೆ ರಿಪೇರಿಗೆ ಉಪಯೋಗಿಸಿದ್ದಾದರೆ ರೈತರಿಗೆ ಹಿತವಾದೀತು. ಪ್ರತಿವರ್ಷ ರಿಪೇರಿಗಾಗಿ ತೆಗೆದಿಟ್ಟ ಹಣ ಎಲ್ಲಿ ಮಂಗಮಾಯವಾಗುತ್ತಿದೆಂಬುದನ್ನು ಕಂಡುಹಿಡಿಯುವುದು ಅತ್ಯಗತ್ಯ.

ದಾರಿ-ವಾಹತುಕ ವ್ಯವಸ್ಥೆ

ಈ ಭಾಗದ ಜನ ಒಣ ಬೇಸಾಯಕಷ್ಟೇ ಹೊಂದಿಕೊಂಡು ಬಂದಿರುವುದರಿಂದ, ತುಂಗಭದ್ರಾ ನೀರಾವರಿ ಯೋಜನೆ ಪ್ರಾರಂಭವಾದಾಗಲೇ ನೀರಾವರಿ ಒಕ್ಕಲತನದಲ್ಲಿ ಪರಿಣಿತರಾದ ಆಂಧ್ರದ ಜನ ಈ ಭಾಗದಲ್ಲಿ ಬಂದು ನೆಲೆಸಿದರು. ಹೊಲದ ಸಮೀಪ ಇವರು ಗುಡಿಸಲು ಹಾಕಿ ತಂತಮ್ಮ ಕ್ಯಾಂಪು ಮಾಡಿಕೊಂಡಿದ್ದಾರೆ. ಇಂಥ ಕ್ಯಾಂಪುಗಳು ಕೆಲವು ರಸ್ತೆ ಬದಿಯಲ್ಲೂ, ಕೆಲವು 10-15 ಮೈಲು ದೂರದಲ್ಲೂ ಇವೆ. ಪ್ರತಿಯೊಂದು ಕ್ಯಾಂಪಿನಲ್ಲೂ 200 ರಿಂದ 10 ಸಾವಿರದವರೆಗೆ ಭೂಮಾಲಕರೂ ಕೃಷಿಕಾರ್ಮಿಕರೂ ಇದ್ದಾರೆ. ಬಹಳಷ್ಟು ಕ್ಯಾಂಪುಗಳಿಗೆ ಸರಿಯಾದ ದಾರಿಯಿಲ್ಲ, ವಾಹತುಕದ ವ್ಯವಸ್ಥೆಯಿಲ್ಲ. ಹೀಗಾಗಿ ಬಡವರಿಗೆ ದೈನಂದಿನದ ವಸ್ತುಗಳು ಸಿಗುವುದೂ ಕಷ್ಟ, ಒಕ್ಕಲತನಕ್ಕೆ ಬೇಕಾದ ಗೊಬ್ಬರ ಮತ್ತಿತರ ವಸ್ತುಗಳನ್ನು ಸಾಗಿಸುವುದೂ ಕಷ್ಟಕರವಾಗುತ್ತದೆ. ಇದರ ಕಡೆ ಯಾರೂ ಗಮನಹರಿಸುತ್ತಿಲ್ಲ.

ಇಷ್ಟು ವರ್ಷ ಒಣಬೇಸಾಯವನ್ನೇ ಹೊಂದಿಕೊಂಡಿದ್ದ ಕನ್ನಡಿಗರು, ನೀರಾವರಿ ಗದ್ದೆಗಳಲ್ಲಿ (ಹೊಲ) ಆಂಧ್ರದ ಜನರು ದುಡಿಯುತ್ತಿರುವುದನ್ನು ನೋಡಿ, ತಾವೂ ಸ್ಫೂರ್ತಿಗೊಂಡು ಹೊಲ ಖರೀದಿಮಾಡಿ ಭತ್ತ ಮುಂತಾದವುಗಳನ್ನು ಬೆಳೆಸುತ್ತಿದ್ದಾರೆ. ಒಣ ಬೇಸಾಯಕ್ಕಿಂತ ನೀರಾವರಿ ಬೇಸಾಯ ಹೆಚ್ಚು ಲಾಭದಾಯಕವೆಂದು ಮನಗಂಡು ಆಂಧ್ರದ ರೈತರ ಅನುಕರಣೆ ಮಾಡುತ್ತಿರುವುದನ್ನು ನೋಡಿ ಆನಂದವಾಯಿತು.

ಕೃಷಿಕಾರ್ಮಿಕರ ಪ್ರಶ್ನೆ

ನೀರಾವರಿ ಪ್ರದೇಶದಲ್ಲಿ ಲಕ್ಷಾವಧಿ ಜನ ದುಡಿಯುತ್ತಿದ್ದಾರೆ. ಅವರ ಮುಖ್ಯ ಪ್ರಶ್ನೆ ಕೂಲಿ. ತಮ್ಮ ದುಡಿತಕ್ಕೆ ಸರಿಯಾಗಿ ಕೂಲಿ ಸಿಗುತ್ತಿಲ್ಲ. ಮೂರು ರೂಪಾಯಿಂದ ಐದರವರೆಗೆ ದಿನಕೂಲಿಕೊಡಲಾಗುತ್ತಿದೆ. ದೂರದ ಊರಿಂದ ಬಂದು ತಮ್ಮದೇ ಗುಡಿಸಲುಗಳಲ್ಲಿ ನೆಲೆಸಿ ದಿನಗೂಲಿ ಮಾಡುತ್ತಾರೆ. ಇವರ ಸಂಘಟನೆ ಅಗತ್ಯ. ಹೆಚ್ಚು ಕೂಲಿಗಾಗಿ ಹೋರಾಡಬೇಕು.

ಈಗಿನ ಬಂಡವಾಳಶಾಹಿ ಪದ್ಧತಿಯಲ್ಲಿ, ವೈಯ್ಯಕ್ತಿಕ ಹಿಡುವಳಿ ಇರುವಾಗ, ಒಕ್ಕಲತನಕ್ಕೆ ಯಂತ್ರೀಕರಣ ಆರ್ಥಿಕವಾಗಿಯೂ, ಭೂಮಿಯನ್ನು ಹಸನುಮಾಡುವ ದೃಷ್ಟಿಯಲ್ಲೂ ಹಿತಕರವಲ್ಲೆಂದು ಭೂಮಿ ಹೊಂದಿರುವ ರೈತರ ಅಭಿಪ್ರಾಯ. ರಷ್ಯಾ, ಅಮೇರಿಕಾ ದೇಶಗಳ ಉದಾಹರಣೆ ತೋರಿಸಿದಾಗ, ಅಲ್ಲಿ ವಿಶಾಲವಾದ ಭೂಮಿ ಇರುವುದರಿಂದಲೂ ರೈತ ಉಪಯೋಗಿಸುತ್ತಿರುವ ಸಲಕರಣೆಗಳಿಗೂ, ಅವ ಉತ್ಪಾದಿಸುತ್ತಿರುವ ಬೆಳೆಗಳಿಗೂ ಹೊಂದಾಣಿಕೆ ಇರುವುದರಿಂದ, ರಷ್ಯಾ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಇಲ್ಲದಿರುವುದರಿಂದ, ಅಂಥ ದೇಶಗಳಲ್ಲಿ ಒಕ್ಕಲತನಕ್ಕೆ ಯಾಂತ್ರೀಕರಣ ಸಹಾಯಕವೆಂದು ಅವರ ಅಭಿಪ್ರಾಯ.

ಸಿಂಧನೂರು ತಾಲೂಕಿನಲ್ಲಿ ಕೇಂದ್ರ ಸಂಶೋಧನ ಕೇಂದ್ರ ಒಂದಿದೆ. ರಷ್ಯಾ ದೇಶದ ಸಹಾಯದಿಂದ ಈ ಸಂಶೋಧನ ಕೇಂದ್ರವನ್ನು ನಡೆಸಲಾಗುತ್ತಿದೆ. ಸಾವಿರಾರು ಎಕರೆ ಭೂಮಿಯಲ್ಲಿ ಇವರು ಸಂಶೋಧನೆ ಮಾಡುತ್ತಿದ್ದಾರೆ. ಆದರೆ ಈ ಕೇಂದ್ರ ಪ್ರತಿ ವರ್ಷ 8–10ಲಕ್ಷ ರೂಪಾಯಿ ಹಾನಿಯನ್ನನುಭವಿಸುತ್ತಿದೆ. ಯಾಕೆಂದರೆ ಈ ಕೇಂದ್ರಕ್ಕೆ ತರಿಸಲಾಗುತ್ತಿರುವ ರಸಾಯನಿಕ ಗೊಬ್ಬರ, ಬೀಜಗಳನ್ನೆಲ್ಲ ಸರಿಯಾಗಿ ಉಪಯೋಗಿಸದೆ ದುರುಪಯೋಗಪಡಿಸಲಾಗುತ್ತಿದೆಯೆಂದು ರೈತರ ಆರೋಪ. ಈ ಕೇಂದ್ರ ಸಂಶೋಧನಾ ಕೇಂದ್ರದ ಬದಿಯಲ್ಲಿರುವ 500 ಎಕರೆ ಖಾಸಗಿ ಭೂಮಿಯಲ್ಲಿ ಮೂರು ವರ್ಷದ ನಂತರ ಗಳಿಸಿದ ಲಾಭದಲ್ಲಿ ಬೆಂಗಳೂರಿನಲ್ಲಿ ಕಾರ್ಖಾನೆಯೊಂದನ್ನು ಸ್ಥಾಪಿಸಿ, ಕೊಡಗಿನಲ್ಲಿ 500 ಎಕ್ರೆ ಕಾಫಿತೋಟ ಕೊಂಡುಕೊಂಡದ್ದಲ್ಲದೆ, ತಮ್ಮಲ್ಲಿ ದುಡಿಯುತ್ತಿರುವ ಹಾಗೂ ನೆರೆ-ಕರೆ ಹಳ್ಳಿಗಳ ಜನರಿಗೆ ಉಚಿತ ಔಷಧೋಪಚಾರ ಮಾಡಲು ಉತ್ತಮ ದವಾಖಾನೆ ಕಟ್ಟಿಸಿ, ಒಬ್ಬ ಎಂ.ಬಿ.ಬಿ.ಎಸ್. ಡಾಕ್ಟರ್, ಒಬ್ಬ ನರ್ಸ್, ಒಬ್ಬ ಕಾಂಪೌಂಡರನ್ನು ತಾವೇ ಪಗಾರ ಕೊಟ್ಟು ನೇಮಿಸಿಕೊಂಡಿದ್ದಾರೆ. ಕೆಲವೇ ವರ್ಷದಲ್ಲಿ ಶಾಲೆ ಕಟ್ಟಿಸುವ ಯೋಜನೆ ಮಾಡಿಕೊಂಡಿದ್ದಾರೆ. ಬಂಡವಾಳಶಾಹಿ ಭ್ರಷ್ಟಾಚಾರ ಸರಕಾರಿ ಆಡಳಿತೆಯಲ್ಲಿ ಸಂಶೋಧನಾ ಕೇಂದ್ರದಲ್ಲಿ ಹಾನಿಯಾಗುತ್ತಿರುವಾಗ, ಖಾಸಗೀ ಜನರು ಗಳಿಸುತ್ತಿರುವ ಲಾಭದ ಕಡೆ ರೈತರು ಬೊಟ್ಟುಮಾಡಿ ತೋರಿಸುತ್ತಾರೆ. ಇದು ಸಮಾಜ ಪದ್ಧತಿಯ ತಪ್ಪೆಂಬುದನ್ನು ತಿಳಿಸಿಕೊಡಬೇಕು.

ಕೃಷಿಕಾರ್ಮಿಕರ, ಒಗ್ಗಲಿಗರ ಸಮಸ್ಯೆಗಳಿಗೆ ಪರಿಹಾರ ಸಿಗಬೇಕು. ಸಂಘಟಿತರಾಗಿ ಹೋರಾಡುವ ಪ್ರವೃತ್ತಿ ಜನರಲ್ಲಿ ಕಡಿಮೆ. ಕಾರಣ ರೈತಸಂಘದವರು ಜವಾಬ್ದಾರಿ ಹೊತ್ತು ಸಂಘಕಟ್ಟಿ, ಹೋರಾಡಿ, ಈ ಜನರಿಗೆ ನ್ಯಾಯಕೊಡಿಸಬೇಕು. ರೈತರಲ್ಲಿ ತಿಳುವಳಿಕೆ ಉಂಟಾಗಲಿ, ರೈತ ಸಂಘ ತನ್ನ ಜವಾಬ್ದಾರಿಯನ್ನು ಹೊತ್ತು ಹೆಣಗಲಿ.

o

ರೈತ ಹುತಾತ್ಮ ದಿನಾಚರಣೆ

ಮಲಪ್ರಭಾ ರೈತ ಸಮನ್ವಯ ಸಮಿತಿ ಮತ್ತು ಕರ್ನಾಟಕ ಪ್ರಾಂತ ರೈತಸಂಘ, ಧಾರವಾಡ ಜಿಲ್ಲಾ ಘಟಕದ ಸಂಯುಕ್ತ ಆಶ್ರಯದಲ್ಲಿ ಜುಲೈ 21, 81ರಂದು ನರಗುಂದ ತಾಲ್ಲೂಕಿನ ಚಿಕ್ಕನರಗುಂದ ಗ್ರಾಮದಲ್ಲಿ, ಮತ್ತು ನವಲಗುಂದ ತಾಲ್ಲೂಕಿನ ಅಳಗವಾಡಿ ಗ್ರಾಮದಲ್ಲಿ ರೈತ ಹುತಾತ್ಮ ದಿನಾಚರಣೆಯನ್ನು ಆಚರಿಸಲಾಯಿತು. ಇಡೀ ರಾಜ್ಯ ರೈತ ಹೋರಾಟಕ್ಕೆ ಸ್ಫೂರ್ತಿ ನೀಡಿದ್ದ ಮಲಪ್ರಭಾ ರೈತ ಹೋರಾಟದಲ್ಲಿ 1980, ಜುಲೈ 21ರಂದು "ಬಂದ್" ಆಚರಣೆ ಸಂದರ್ಭದಲ್ಲಿ ಗೋಳಿಬಾರು ನಡೆದು ಚಿಕ್ಕನರಗುಂದದ ದಿ॥ ಈರಪ್ಪ ಬಸಪ್ಪ ಕಡ್ಲೆಕೊಪ್ಪ ಮತ್ತು ಅಳಗವಾಡಿಯ ದಿ. ಬಸಪ್ಪ ಶಿವಪ್ಪ ಲಕ್ಕುಂಡಿ ಇವರು ಬಲಿದಾನವಾದುದರ ಹಿನ್ನೆಲೆಯಲ್ಲಿ ಅವರ ಸ್ಮರಣಾರ್ಥ "ರೈತ ಹುತಾತ್ಮ ದಿನಾಚರಣೆಯನ್ನು" ಜರುಗಿಸಲಾಯಿತು.

ಅಳಗವಾಡಿಯಲ್ಲಿ ಮತ್ತು ಚಿಕ್ಕನರಗುಂದದಲ್ಲಿ ಸಭೆಗಳನ್ನು ಏರ್ಪಡಿಸಲಾಗಿತ್ತು. ಸಭೆಗಳು ಜರುಗುವುದಕ್ಕಿಂತಲೂ ಮೊದಲು ಎರಡು ಗ್ರಾಮಗಳಲ್ಲಿ ಹುತಾತ್ಮರ ಭಾವಚಿತ್ರಗಳನ್ನು ಭಜನೆ, ವಾದ್ಯ, ಘೋಷಣೆಗಳೊಂದಿಗೆ ವಿಜೃಂಭಣೆಯಿಂದ ಮೆರೆಯಿಸಲಾಯಿತು. ಸುತ್ತಮುತ್ತಲಿನ ಗ್ರಾಮಗಳ ರೈತರು ಸಹ ಬೃಹತ್ ಸಂಖ್ಯೆಯಲ್ಲಿ ಸೇರಿದ್ದರು. ಹುತಾತ್ಮರ ಚಿರಸ್ಮರಣೆಗಾಗಿ ಸ್ಮಾರಕಗಳ ಮತ್ತು ಸ್ಮಾರಕ ರೈತಸಂಘ ಕಟ್ಟಡಗಳ ಶಂಕು ಸ್ಥಾಪನೆಯನ್ನು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕಾಂ. ಸ್ವಾಮಿನಿತ್ಯಾನಂದ ನೆರವೇರಿಸಿದರು. ಉಭಯ ಸಮಾರಂಭಗಳ ಅಧ್ಯಕ್ಷತೆಯನ್ನು ಅನುಕ್ರಮವಾಗಿ ಶ್ರೀ ಬಿ. ಆರ್. ಯಾವಗಲ್ ಮತ್ತು ಕಾಂ. ಎಸ್. ಕಪ್ಪಣ್ಣನವರು ವಹಿಸಿದ್ದರು.

ಮಲಪ್ರಭಾ ರೈತ ಬಂಡಾಯದ ಮುಖ್ಯ ನಾಯಕರಾದ ಕಾಂ. ವಿ. ಎನ್. ಹಳಕಟ್ಟಿ ಅವರು ಈ ಐತಿಹಾಸಿಕ ಸಂದರ್ಭದಲ್ಲಿ ಮಾತನಾಡುತ್ತ "ಜುಲೈ 21ರಂದು ಜರುಗಿದ ಮಲಪ್ರಭಾ ರೈತ ಬಂಡಾಯ" ಕರ್ನಾಟಕ ರಾಜ್ಯ ರೈತರ ಹೋರಾಟದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವ ಅಂಶ ಎಂದು ಬಣ್ಣಿಸಿದರು. ಕರ್ನಾಟಕ ರೈತರು ಭಾರತದಲ್ಲೇ ಅತ್ಯಂತ ತೀವ್ರವಾಗಿ, ಸುದೀರ್ಘವಾಗಿ ಒಂದು ವರ್ಷದಲ್ಲಿ ನಡೆಸಿದ ಹೋರಾ

(7ನೇ ಪುಟ ನೋಡಿ)

ವಿಷ್ಯನ್ನರ ಮೇಲೆ ಫ್ಯಾಸಿಸ್ಟರ ದೌರ್ಜನ್ಯ

(3ನೇ ಪುಟದಿಂದ)

ಈ ಸಮಸ್ಯೆಯು ಹಲವಾರು ಕಾರಣಗಳಿಂದ ಇನ್ನೂ ಸಂಕೀರ್ಣಗೊಂಡಿದೆ. ವಲಸೆ ಬಂದವರು ಮಾಡುತ್ತಿದ್ದಂತ ಕೆಲಸಗಳನ್ನು ಯಂತ್ರದ ಬಳಕೆಯಿಂದ ಮಾಡಲಾಗುತ್ತಿದೆ. ಇದರಿಂದಾಗಿ ಈ ಜನರ ನಿರುದ್ಯೋಗ ಅಧಿಕಗೊಂಡಿದೆ. ಅಲ್ಲದೆ ಬ್ರಿಟನ್ನಿನಲ್ಲಿ ಆರ್ಥಿಕ ಬಿಕ್ಕಟ್ಟು ತೀವ್ರಗೊಂಡಿದ್ದು ಜನಾಂಗೀಯ ನೀತಿಯು ಪ್ರಮುಖವಾದ ರಾಜಕೀಯ ವಿಷಯವಾಗಿದೆ.

ಇಂಗ್ಲೇಂಡಿನ ಸುಮಾರು 80ಪಾರ್ಲಿಮೆಂಟ್ ಮತಕ್ಷೇತ್ರಗಳಲ್ಲಿ ವಲಸೆಗಾರರು ಗಣನೀಯವಾಗಿದ್ದು ಚುನಾವಣಾ ಫಲಿತಾಂಶವನ್ನು ನಿರ್ಣಯಿಸುವ ಸ್ಥಿತಿಯಲ್ಲಿದ್ದಾರೆ. ಈ ಕ್ಷೇತ್ರಗಳಲ್ಲಿ ಸಾಮಾನ್ಯವಾಗಿ ಎಡಪಂಥೀಯ ಲೇಬರ್ ಪಕ್ಷದ ಅಭ್ಯರ್ಥಿಗಳೇ ಗೆಲ್ಲುತ್ತಿದ್ದಾರೆ. ಬ್ರಿಟನ್ನಿನ ಪ್ರತಿಗಾಮಿಗಳಿಗೆ ಇದು ನುಂಗಲಾರದ ತುತ್ತು.

ವಲಸೆ ಬಂದಿರುವ ವರ್ಣೀಯರು, ವಿಶೇಷವಾಗಿ ಏಷ್ಯನ್ನರು ಕಾರ್ಮಿಕ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುವುದರಲ್ಲಿ ಇವರುಗಳು ಮುಂದಿದ್ದಾರೆ.

'ವರ್ಣ ಪ್ರಜ್ಞೆ' ದಶಕದ ಹಿಂದೆ ಕೇವಲ ಉದ್ಯೋಗಗಳ ನೀಡಿಕೆಯಲ್ಲಿ ಕಂಡುಬರುತ್ತಿತ್ತು. ಆದರೆ ಇಂದು ಫ್ಯಾಸಿಸ್ಟ್ ರಾಜಕೀಯ ಶಕ್ತಿಗಳು ಈ ಸಮಸ್ಯೆಗೊಂದು ಸೈದ್ಧಾಂತಿಕ ತಿರುವು ಕೊಡಲು ಯತ್ನಿಸುತ್ತಿವೆ. ಮನೋವಿಜ್ಞಾನಿಗಳ, ಸಮಾಜವಿಜ್ಞಾನಿಗಳ ಹಾಗೂ ವೈಚಾರಿಕರ ಕೃತಿಗಳ ಮೂಲಕ ಈ ಪ್ರತಿಗಾಮಿ ವರ್ಣನೀತಿಗೆ ತಾತ್ವಿಕ ನೆಲೆಗಟ್ಟನ್ನು ಒದಗಿಸುತ್ತಿದ್ದಾರೆ.

ಬ್ರಿಟನ್ನಿನ ಲೇಬರ್ ಪಕ್ಷದ ನಾಯಕರು ಹಾಗೂ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷಗಳು ಈ ಸಂಬಂಧದಲ್ಲಿ ಸ್ಪಷ್ಟ ನಿಲುವನ್ನು ತಳೆದಿವೆ. ಏಷ್ಯನ್ನರು ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆಂದು ಕೆನ್ ಲಿವಿಂಗ್‌ಸ್ಟನ್ ಸೌತ್‌ಹಾಲ್‌ನಲ್ಲಿ ಮಾಡಿದ ಭಾಷಣದಲ್ಲಿ ಬೆಂಬಲಿಸಿದ್ದಾರೆ ಮತ್ತು ಬಂಧಿಸಿರುವ ಏಷ್ಯನ್ನರನ್ನು ಬಿಡುಗಡೆಮಾಡಬೇಕೆಂದು ಒತ್ತಾಯಿಸಿದ್ದಾರೆ. ಆದರೆ ಜನಾಂಗೀಯ ವಿಧ್ವಂಸಕಾರಿ ಘಟನೆಗಳ ಬಗ್ಗೆ ಭಾರತ ಸರ್ಕಾರ ಯಾವುದೇ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳದಿರುವುದು ಬ್ರಿಟನ್ನಿನಲ್ಲಿರುವ ಭಾರತೀಯರಿಗೆ ದಿಗ್ಭ್ರಮೆಯುಂಟುಮಾಡಿದೆ.

ಪ್ರಪಂಚದ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳನ್ನು ವಿಮಂಚನೆಗೊಳಮಾಡಿರುವ ಈ ಸಂದರ್ಭದಲ್ಲಿ ಭಾರತದ ರಾಷ್ಟ್ರಪತಿ ಮಧ್ಯಕಾಲೀನ ಯುಗದ ಹಾಸ್ಯಾಸ್ಪದ ಆಚರಣೆಯಾದ ಬ್ರಿಟಿಷ್ ರಾಜಮನೆತನದ ವಿವಾಹದಲ್ಲಿ ಭಾಗವಹಿಸುತ್ತಿರುವುದು ಭಾರತೀಯರು ತಲೆತಗ್ಗಿಸಬೇಕಾದ ವಿಷಯವಾಗಿದೆ.

○

ಬ್ರಿಟನ್ ಜನಾಂಗೀಯ ಹಿಂಸೆ ಕುರಿತ ಪೊಲಿಟ್‌ಬ್ಯೂರೋ ಹೇಳಿಕೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಇಂಗ್ಲೆಂಡಿನ ಲಿವರ್‌ಪೂಲ್ ಸೌತ್‌ಹಾಲ್ ಪ್ರದೇಶಗಳ ಏಷ್ಯನ್ನರು ಮತ್ತು ಇನ್ನಿತರ ಕಪ್ಪುಜನರ ವಿರುದ್ಧ ನಡೆದಿರುವ ಹಲ್ಲೆಯಿಂದಾಗಿ ದಿಗ್ಭ್ರಮೆಗೊಂಡಿದೆ.

ಇಂಗ್ಲೆಂಡಿನಲ್ಲಿ 'ಜನಾಂಗೀಯ ರಾಷ್ಟ್ರೀಯತೆ' ಮಸೂದೆಯು ಕಾನೂನಾದ ನಂತರ ವರ್ಣೀಯರು ಮುಂಬರುವ ದಿನಗಳಲ್ಲಿ ಎದುರಿಸಬೇಕಾದ ಪರಿಸ್ಥಿತಿಗೆ ಈ ಹಲ್ಲೆಗಳು ಮುನ್ನೆಚ್ಚರಿಕೆಯಾಗಿವೆ. ಈ ಹಲ್ಲೆಗಳನ್ನು ತೀವ್ರಗಾಮಿ ಜನಾಂಗೀಯ ಸಂಘಟನೆಗಳು ನೇರವಾಗಿ ಸಂಘಟಿಸಿದ್ದು, ಟೋರಿ ಸರ್ಕಾರವು ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿದೆ.

ಈ ಧಾಳಿಯನ್ನು ಧೈರ್ಯದಿಂದ ಎದುರಿಸುತ್ತಿರುವ ಭಾರತೀಯ ಹಾಗೂ ಇನ್ನಿತರ ಕರಿಯರಿಗೆ ಪೊಲಿಟ್‌ಬ್ಯೂರೋ ತನ್ನ ಸೌಹಾರ್ದಯುತ ಬೆಂಬಲದನ್ನು ನೀಡುತ್ತದೆ. ಜನಾಂಗದ್ವೇಷ ನೀತಿಯನ್ನು ವಿರೋಧಿಸುತ್ತಿರುವ ಮತ್ತು ಬ್ರಿಟನ್ನಿನ ಕರಿಯರಿಗೆ ಬೆಂಬಲ ನೀಡುತ್ತಿರುವ ಲೇಬರ್ ಪಕ್ಷ ಹಾಗೂ ಇನ್ನಿತರ ಬ್ರಿಟನ್ನಿನ ಪ್ರಜಾಸತ್ತಾತ್ಮಕ ವಿಭಾಗಗಳನ್ನು ಪೊಲಿಟ್‌ಬ್ಯೂರೋ ಅಭಿನಂದಿಸುತ್ತದೆ.

ಪ್ರತಿಗಾಮಿ ಬ್ರಿಟಿಷ್ ಸರ್ಕಾರ ತನ್ನ ಜನಾಂಗೀಯ ನೀತಿಯನ್ನು ಕೊನೆಗೊಳಿಸಲು ಒತ್ತಾಯಿಸುವಂತೆ ಮತ್ತು ಬ್ರಿಟನ್ನಿನಲ್ಲಿ ನರಳುತ್ತಿರುವ ಕರಿಯರಿಗೆ ಸೌಹಾರ್ದಯುತ ಬೆಂಬಲ ನೀಡುವಂತೆ ಪ್ರಪಂಚದ ಎಲ್ಲ ಪ್ರಜಾಸತ್ತಾತ್ಮಕ ದೇಶಗಳಿಗೂ ಹಾಗೂ ಭಾರತದ ಎಲ್ಲ ರಾಜಕೀಯ ಪಕ್ಷಗಳಿಗೂ ನಾವು ಮನವಿ ಮಾಡಿಕೊಳ್ಳುತ್ತೇವೆ.

ಮಿಂಚಿನ ಮುಷ್ಕರ

ತಾರೀಕು 24-7-1981 ರಂದು ಬೆಳಿಗ್ಗೆ ಸಿಟಿ ಬಸ್ಸೊಂದರ ಡ್ರೈವರ್ ಮತ್ತು ಕಂಡಕ್ಟರರಿಗೆ ಅನ್ಯಾಯವಾಗಿ ಡಿ. ವೈ. ಎಸ್. ಪಿ. ಶ್ರೀ ಜ್ಯೋತಿ ಪ್ರಕಾಶ್ ಮಿರ್ಜಿಯವರು ಥಳಿಸಿದ ಮತ್ತು ಅವರನ್ನು ಅವಾಚ್ಯ ಶಬ್ದಗಳಿಂದ ಬೈದು ಪೋಲೀಸ್ ಸ್ಟೇಷನ್ನಿಗೆ ಎಳೆದೊಯ್ದುದನ್ನು ಪ್ರತಿಭಟಿಸಿ, ಮಂಗಳೂರಿನ ಎಲ್ಲಾ ಸಿಟಿಬಸ್ಸ್ ಡ್ರೈವರರು ಮತ್ತು ಕಂಡಕ್ಟರ್‌ಗಳು ಇಂದು ಬೆಳಿಗ್ಗೆ ಹನ್ನೊಂದು ಗಂಟೆಯಿಂದ ಮಿಂಚಿನ ಮುಷ್ಕರ ನಡೆಸಿದರು. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸು ಅಧಿಕಾರಿಗಳು ಈ ಸಂಬಂಧವಾಗಿ ಮೋಟಾರು ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ನಿನ (ಸಿ. ಐ. ಟಿ. ಯು.) ಮುಂದಾಳುಗಳನ್ನು ಮತ್ತು ಬಸ್ಸ್ ನೌಕರರ ಪ್ರತಿನಿಧಿಗಳನ್ನು ಮಾತುಕತೆಗೆ ಕರೆದು ಸುದೀರ್ಘ ಚರ್ಚೆ ನಂತರ, ಬಸ್ಸ್ ಕಾರ್ಮಿಕರ ಮೇಲೆ ಪೋಲೀಸು ಅಧಿಕಾರಿಯವರು ಕೈ ಮಾಡಿರುವುದು ತಪ್ಪೆಂದು, ಇನ್ನು ಮುಂದೆ ಇಂತಹ ಘಟನೆಗಳನ್ನು ನಡೆಯದಂತೆ ನೋಡಿಕೊಳ್ಳುವುದಾಗಿ ಆಶ್ವಾಸನೆ ನೀಡಿದ ನಂತರ ಮಧ್ಯಾಹ್ನ ಮೂರು ಮೂವತ್ತು (3-30)ಕ್ಕೆ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು. ಕ್ಷುಲ್ಲಕ ಕಾರಣಕ್ಕಾಗಿ ದಸ್ತಗಿರಿ ಮಾಡಿದ ಡ್ರೈವರರನ್ನು ನಿಶ್ಶರ್ತವಾಗಿ ಬಿಡುಗಡೆಗೊಳಿಸಲಾಯಿತು.

ಮೋಟಾರು ಕಾರ್ಮಿಕರಿಂದ ಇಲ್ಲವೇ ಇತರ ಕಾರ್ಮಿಕರಿಂದ ಕಾನೂನು ಉಲ್ಲಂಘನೆಯಾದರೆ ಕಾನೂನು ಪ್ರಕಾರ ಕ್ರಮಕೈಗೊಳ್ಳಬಹುದೇ ಹೊರತು ಅವರನ್ನು ಹೊಡೆಯಲು ಪೋಲೀಸು ಅಧಿಕಾರಿಗಳಿಗೆ ಹಕ್ಕಿಲ್ಲ. ಮಂಗಳೂರಿನ ಡಿ. ವೈ. ಎಸ್. ಪಿ.ಯವರು ನಡೆಸಿದ ಅಮಾನುಷ ದೌರ್ಜನ್ಯವನ್ನು ಯೂನಿಯನ್ ಬಲವಾಗಿ ಖಂಡಿಸಿದೆ. ನಮ್ಮ ಸಂಗಾತಿಯ ಮೇಲೆ ನಡೆದ ದೌರ್ಜನ್ಯವನ್ನು ಅತ್ಯಂತ ಶಿಸ್ತುಬದ್ಧವಾಗಿ ಪ್ರತಿಭಟಿಸಿ, ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿದ ಎಲ್ಲಾ ಬಸ್ಸ್ ಡ್ರೈವರ್ ಮತ್ತು ಕಂಡಕ್ಟರರನ್ನು ಯೂನಿಯನ್ ಪರವಾಗಿ ಕಾಂ. ಕೆ. ಮೂಸಬ್ಬ ಅಭಿನಂದಿಸಿದ್ದಾರೆ.

ಅನಿವಾರ್ಯ ಕಾರಣದಿಂದ ಮುಷ್ಕರಮಾಡಬೇಕಾದ ಪರಿಸ್ಥಿತಿಯಲ್ಲಿ ಸಹಕರಿಸಿದ ಸಾರ್ವಜನಿಕರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

○

ನಿವೇಶನಗಳಿಗೆ ಒತ್ತಾಯ

20-7-81ರಂದು ಬೆಳಗಾವಿಯ ಮಾರುತಿಮಂದಿರದಲ್ಲಿ ಇಂಡಾಲ್ ಕಾರ್ಮಿಕರ ಸರ್ವಸದಸ್ಯರ ಸಭೆ ನಡೆದು ಉಚಿತ ನಿವೇಶನಗಳಿಗಾಗಿ ಹೋರಾಡಲು ನಿರ್ಧರಿಸಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಕಾಂ. ಆರ್. ಜಿ. ಸ್ಥಳೇಕರ್ ವಹಿಸಿದ್ದರು. ಸರಕಾರ ಕೈಗಾರಿಕಾ ಉದ್ದೇಶಗಳಿಗಾಗಿ ಇಂಡಾಲ್ ಮ್ಯಾನೇಜ್‌ಮೆಂಟಿಗೆ 1600 ಎಕರೆ ಜಮೀನನ್ನು ಕೊಟ್ಟಿರುವುದನ್ನು ತಿಳಿಸಿದ ಕಾಂ. ಸ್ಥಳೇಕರ್, ಅನೇಕ ವರ್ಷಗಳಿಂದ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ನಿವೇಶನ ದೊರೆಯುವುದು ಅವಶ್ಯ ಎಂದರು. ಈ ಕುರಿತು ಧೀರ ಹೋರಾಟ ಮಾಡಿದ ದಾಂಡೇಲಿಯ ಕಾರ್ಮಿಕರನ್ನು ಕಾಂ. ಸ್ಥಳೇಕರ್ ಉದಾಹರಿಸಿದರು.

ಯೂನಿಯನ್ನಿನ ಉಪಾಧ್ಯಕ್ಷ ಕಾಂ. ವಿ.ಜೆ.ಕೆ. ನಾಯರ್ ಮಾತನಾಡುತ್ತಾ ಬಾಂಬೈ ಸಮಾವೇಶದ ಪ್ರಾಮುಖ್ಯತೆಯನ್ನು ತಿಳಿಸಿ ಅಲ್ಲಿ ಅಂಗೀಕರಿಸಿದ ನಿರ್ಣಯಗಳನ್ನು ಸಭೆಗೆ ತಿಳಿಸಿದರು. ಬಾಂಬೈ ಸಮಾವೇಶದ ನಿರ್ಣಯಗಳನ್ನು ಇಂಡಾಲ್ ಕಾರ್ಮಿಕರ ಸರ್ವಸದಸ್ಯರ ಸಭೆಯು ಬೆಂಬಲಿಸಿತು. ಕಾಂ. ವಿ. ಜೆ. ಕೆ. ಮುಂದುವರೆದು ಹೈದರಾಬಾದ್‌ನಲ್ಲಿ ನಡೆದ ಕನಿಷ್ಠ ವೇತನ ಸಮಾವೇಶದ ವರದಿ ಒಪ್ಪಿಸಿದರು. ಇಂಡಾಲ್ ಕಾರ್ಮಿಕರು ಹೈದರಾಬಾದ್ ಸಮಾವೇಶದಲ್ಲಿ ತೀರ್ಮಾನವಾದ 500 ರೂ. ಕನಿಷ್ಟ ವೇತನದ ಬೇಡಿಕೆಯನ್ನು ಬೆಂಬಲಿಸಿದರು.

ಆಡಳಿತ ವರ್ಗದ ನಿರ್ದೇಶನದಂತೆ ಸ್ಥಳೀಯ ಪೋಲೀಸರು ಕಾರ್ಮಿಕರ ವಿರುದ್ಧ ಸುಳ್ಳು ಕೇಸುಗಳನ್ನು ಹಾಕಿರುವುದನ್ನು ಉಗ್ರವಾಗಿ ಖಂಡಿಸಿದ ಸಭೆ, ಈ ಕೇಸುಗಳನ್ನು ಹಿಂತೆಗೆದುಕೊಳ್ಳುವಂತೆ ಡಿ.ಸಿ. ಮತ್ತು ಎಸ್.ಪಿ. ಆಫೀಸುಗಳೆದುರು ಮತಪ್ರದರ್ಶನ ಮತ್ತು ಪಿಕೆಟಿಂಗ್ ಮಾಡಲು ನಿರ್ಧರಿಸಿತು.

ಯೂನಿಯನ್ನಿನ ಪ್ರಧಾನಕಾರ್ಯದರ್ಶಿ ಕಾಂ. ಟಿ. ಆರ್ ಜಿ. ನಾಯರ್ ಮತ್ತು ಕಾಂ. ವಿಶ್ವನಾಥ ಮಾತನಾಡುತ್ತಾ ಕಾಂಟ್ರ್ಯಾಕ್ಟ್ ಕಾರ್ಮಿಕರ ಕೆಲವು ಬೇಡಿಕೆಗಳ ಇತ್ಯರ್ಥದ ಕುರಿತು ಯೂನಿಯನ್ನಿನ ಪ್ರಯತ್ನಗಳನ್ನು ವಿವರಿಸಿದರು. ಕೊನೆಯಲ್ಲಿ ಕಾಂ. ನಾಗಯ್ಯ ವಂದಿಸಿದರು.

○

ಹೋಟೆಲ್ ಕಾರ್ಮಿಕರ ಗೆಲುವು

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕಸಂಘದ ನೇತೃತ್ವದಲ್ಲಿ ಹೋಟೆಲ್ ಮೆಜೆಸ್ಟಿಕ್‌ನ ಕಾರ್ಮಿಕರು ಕೆಲವು ಪ್ರಾಥಮಿಕ ಸೌಲಭ್ಯಗಳಿಗಾಗಿ 45 ದಿನಗಳ ಕಾಲ ಹೋರಾಟ ಮಾಡಿ ಜಯಗಳಿಸಿದರು. ಕಾರ್ಮಿಕರ ದೃಢನಿರ್ಧಾರವನ್ನು ಬಗ್ಗುಬಡಿಯಲು ಮಾಲೀಕರು ನಾನಾ ಕುತಂತ್ರಗಳನ್ನು ಮಾಡಿದರೂ ಕಾರ್ಮಿಕರು ಧೃತಿಗೆಡದೆ ಬೇಡಿಕೆಗಳು ಈಡೇರುವವರೆಗೆ ಹೋರಾಡಿದರು.

ಹೋರಾಟದಲ್ಲಿ ಸಹಕರಿಸಿದ ಇತರ ಸಂಘಸಂಸ್ಥೆಗಳಿಗೆ ಹೋಟೆಲ್ ಕಾರ್ಮಿಕ ಸಂಘದ ಪ್ರಧಾನಕಾರ್ಯದರ್ಶಿ ಕಾಂ. ಇ. ಕೆ.ಎನ್. ರಾಜನ್ ಮತ್ತು ಉಪಾಧ್ಯಕ್ಷ ಕಾಂ. ವಿ. ಆರ್. ಅಡವೀಶ ಕೃತಜ್ಞತೆ ಸಲ್ಲಿಸಿದ್ದಾರೆ.

●

ನಿರಪರಾಧಿಗಳ ಹಿಂಸೆ

9-7-81ರಿಂದ ಮಂಗಳೂರು ತಾಲ್ಲೂಕಿನ ಉಳ್ಳಾಲದಲ್ಲಿ ಕಳ್ಳಭಟ್ಟಿ ಶರಾಬಿನ ದಾಳಿಗಾಗಿ ಬಂದಿರುವ ಅಬಕಾರಿ ಪೋಲೀಸರು ಕಳ್ಳಭಟ್ಟಿ ಪಾತಕಿಗಳನ್ನು ಹಿಡಿಯದೇ ನಿರಪರಾಧಿಗಳನ್ನು ಹಿಂಸಿಸುತ್ತಿದ್ದಾರೆ.

ಇಷ್ಟುದಿನ ಕುಂಭಕರ್ಣ ನಿದ್ರೆಯಲ್ಲಿದ್ದ ರಾಜ್ಯದ ಅಬಕಾರಿ ಇಲಾಖೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕಳ್ಳಭಟ್ಟಿ ದುರಂತದ ನಂತರ ದಿಢೀರ್ ಎಚ್ಚತ್ತಿದೆ. ನಿದ್ರೆಗಣ್ಣಿನಲ್ಲಿ ಅಪರಾಧಿಗಳನ್ನು ಪತ್ತೆಮಾಡುವುದು ಬಿಟ್ಟು ಕೈಲಾಗದವನ್ನು ಮೈಪರಚಿಕೊಂಡಂತೆ ನಿರಪರಾಧಿಗಳನ್ನು ಹೊಡೆಯುವುದು–ಬಡಿಯುವುದು ಮಾಡುತ್ತಿದ್ದಾರೆ.

ಪೋಲೀಸರ ದಿನನಿತ್ಯದ ಈ ಕ್ರಮವನ್ನು ಪ್ರತಿಭಟಿಸಿ ಉಳ್ಳಾಲ, ಪೆರ್ಮನ್ನೂರು. ಜಪ್ಪಿನಮೊಗ್ರು ಪಂಚಾಯತ್ ಕ್ಷೇತ್ರದ ನಾಗರಿಕರಿಂದ ರಚಿತವಾದ ನಾಗರಿಕ ಸಮಿತಿಯ ವತಿಯಿಂದ 24-7-81ರಂದು ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಈ ನಿಯೋಗದಲ್ಲಿ ಕಾಂ. ಪಿ. ರಾಮಚಂದ್ರರಾವ್, ಜೆ. ಶದಾಶಿವಶೆಟ್ಟಿ, ಕೆ. ಕೃಷ್ಣಪ್ಪ, ಯು. ಪಿ. ಡಿಸೋಜ, ಗಂಗಾಧರಗಟ್ಟಿ ಮೊದಲಾದವರಿದ್ದರು.

●

ಗಮನಿಸಿ

ಕೇಂದ್ರ ಕಾರ್ಮಿಕ ಸಂಘಟನೆಗಳ ರಾಜ್ಯ ಘಟಕಗಳ ಪ್ರತಿನಿಧಿಗಳು 10-7-81ರಂದು ಬೆಂಗಳೂರಿನಲ್ಲಿ ಸಭೆ ಸೇರಿ 23-8-81ರಂದು ಕಾರ್ಮಿಕ ಸಂಘಗಳ ಕರ್ನಾಟಕ ರಾಜ್ಯ ಸಮಾವೇಶ ನಡೆಸಬೇಕೆಂದು ತೀರ್ಮಾನಿಸಿದ್ದರು. (19-7-81ರ ಐಕ್ಯರಂಗ ನೋಡಿ)

ಆದರೆ ಈಗ ಸಮಾವೇಶವನ್ನು 23-8-81ರ ಬದಲು 6-9-81 ರಂದು ನಡೆಸಬೇಕೆಂದು ತೀರ್ಮಾನಿಸಲಾಗಿದೆ.

○

ಕಾಂಗ್ರೆ ಶಾಸಕನ ಮೇಲೆ ಹಲ್ಲೆ

ಕಾಂಗ್ರೆ ಶಾಸಕರಾದ ಶ್ರೀ ಐ. ಪಿ. ಡಿ. ಸಾಲಪ್ಪ ಮತ್ತು ಬೆಂಗಳೂರು ಜಿಲ್ಲಾ ಕಾಂಗ್ರೆ ಅಧ್ಯಕ್ಷ ಶ್ರೀ ತಿವಾರಿಯವರ ಮೇಲೆ ಖಾನ್ ಮತ್ತು ಹರಿಪ್ರಸಾದ್‌ರ ಗೂಂಡಾಗಳು ಹಲ್ಲೆ ಮಾಡಿರುವುದು ವರದಿಯಾಗಿದೆ. ವಿರೋಧಿ ಅಭಿಪ್ರಾಯಗಳನ್ನು ಖಾನ್‌ರ ಗೂಂಡಾ ಕೂಟ ಸದೆಬಡಿಯುತ್ತಿರುವ ಇನ್ನೊಂದು ದೃಷ್ಟಾಂತವಿದಾಗಿದೆ.

ಪತ್ರಿಕಾ ಕಾರ್ಯಾಲಯಗಳ ಮೇಲೆ, ಕಾರ್ಮಿಕ ಸಂಘಟನೆಗಳ ಮೇಲೆ ದಾಳಿ ಮಾಡಿದ್ದಲ್ಲದೇ, ಸರಕಾರದ ಧೋರಣೆಗಳ ಕುರಿತು ಟೀಕಿಸಿದ ಅವರ ಪಕ್ಷದವರೇ ಆದ ಶ್ರೀ ಸಾಲಪ್ಪನವರ ಮೇಲೆ ಮರಣಾಂತಿಕ ಹಲ್ಲೆಗೆ ಖಾನ್ ಮತ್ತವರ ಗೂಂಡಾ ಕೂಟ ಕಾರಣವಾಗಿದೆ. ಭಿನ್ನಮತೀಯರನ್ನು ದೈಹಿಕವಾಗಿ ಹತ್ತಿಕ್ಕುವ ಈ ಘಟನೆಗೆ ಗೂಂಡೂರಾಯರ ಆಶೀರ್ವಾದವಿರುವುದು ನಿಸ್ಸಂಶಯ.

ಖಾನ್ ಕೂಟದ ಈ ಕೃತ್ಯವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಉಗ್ರವಾಗಿ ಖಂಡಿಸಿರುವುದಲ್ಲದೇ, ಖಾನ್‌ರ ಹಿಂಬಾಲಕರ ಗೂಂಡಾ ಕೃತ್ಯಗಳ ವಿರುದ್ಧ ಹೋರಾಡಲು ಪ್ರಜಾಪ್ರಭುತ್ವ ಶಕ್ತಿಗಳಿಗೆ, ವಿರೋಧಿ ಪಕ್ಷಗಳಿಗೆ ಕರೆನೀಡಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೇರಿರುವ ಶ್ರೀ ಸಾಲಪ್ಪನವರನ್ನು ಸಿ.ಐ.ಟಿ.ಯು. ರಾಜ್ಯಸಮಿತಿ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ಭೇಟಿ ಮಾಡಿದ್ದರು.

○

ರೈತ ಹುತಾತ್ಮ ದಿನಾಚರಣೆ

(5ನೇ ಪುಟದಿಂದ)

ಟದ ಚಿತ್ರಣವನ್ನು ನೆನಪಿಸಿಕೊಟ್ಟರು. ಮಲಪ್ರಭಾ ರೈತ ಹೋರಾಟದಿಂದ ಮೊದಲ್ಗೊಂಡು ಶಿವಮೊಗ್ಗಾ ರೈತ ಹೋರಾಟ, ಕರ್ನಾಟಕ ಪ್ರಾಂತ ರೈತ ಸಂಘದ ಐತಿಹಾಸಿಕ ವಿಧಾನಸೌಧ ರ್‍ಯಾಲಿ, ಕರ್ನಾಟಕ ರಾಜ್ಯ ರೈತರ ಬೆಂಗಳೂರು ಮಹಾಯಾತ್ರೆ, ನಿಪ್ಪಾಣಿ ತಂಬಾಕು ಬೆಳೆಗಾರರ ಹೋರಾಟ ಹೀಗೆ ಒಂದು ವರ್ಷಕಾಲ ಅನೇಕ ಬಲಿದಾನಗಳನ್ನು ಮಾಡಿ ಅತ್ಯಂತ ಧೀರೋದಾತ್ತ ಹೋರಾಟ ನಡೆಸಿದ್ದಕ್ಕೆ ರಾಜ್ಯ ರೈತರನ್ನು ಅಭಿನಂದಿಸಿದರು. ಹುತಾತ್ಮರ ಬಲಿದಾನ ವ್ಯರ್ಥವಾಗಬಾರದೆಂದು ಹೇಳಿದ ಅವರು ರೈತ ಹೋರಾಟವು ಇನ್ನೊಂದು ಹಂತಕ್ಕೆ ಮುಟ್ಟುವಂತೆ ಕೊಂಡಯ್ಯಬೇಕೆಂದು ಕರೆಕೊಟ್ಟರು. ರೈತ ಹೋರಾಟ ಕೆಲವು ಸೈದ್ಧಾಂತಿಕ ಪ್ರಶ್ನೆಗಳನ್ನು ಎದುರಿಸುತ್ತಿರುವ ಈ ಸಂದಿಗ್ಧ ಸಂದರ್ಭದಲ್ಲಿ ರೈತ ಹೋರಾಟ ಅಳವಡಿಸಿಕೊಳ್ಳಬಹುದಾದ ಧ್ಯೆಯೋದ್ದೇಶ, ಗೊತ್ತುಗುರಿ, ಕಾರ್ಯಕ್ರಮಗಳನ್ನು ಸ್ಪಷ್ಟವಾಗಿ ಗುರುತಿಸಿಕೊಂಡು ಮುನ್ನಡೆಯಬೇಕೆಂದು ಹೇಳಿದರು."

ಇದೇ ಸಂದರ್ಭದಲ್ಲಿ "ಕರ್ನಾಟಕ ಸರಕಾರ ಕೆಂಪೇಗೌಡ ನಿಯೋಗದ ವರದಿಯನ್ನು ಮುಚ್ಚಿಟ್ಟಿರುವುದನ್ನು ತೀವ್ರವಾಗಿ ಆಕ್ಷೇಪಿಸಿದರು. ನಿಪ್ಪಾಣಿ ಘಟನೆಗೆ ಸಂಬಂಧಿಸಿ ಸರಕಾರಿ ಅಧಿಕಾರಿಯ ನೇತೃತ್ವದಲ್ಲಿ ರಚಿಸಿದ್ದ ಆಯೋಗ ಈಗಾಗಲೇ ವರದಿ ಸಲ್ಲಿಸಿದ್ದು ಅದನ್ನು ಆತುರದಿಂದ ಪ್ರಕಟಿಸಿದ ಸರಕಾರ ಹಲವು ತಿಂಗಳುಗಳ ಹಿಂದೆಯೇ ಸಲ್ಲಿಸಿದ್ದ ವರದಿಯನ್ನು ಬಚ್ಚಿಟ್ಟಿರುವುದೆಂದು ಖಂಡಿಸಿದರಲ್ಲದೆ ಕೆಂಪೇಗೌಡ ಆಯೋಗವು ನರಗುಂದ–ನವಲಗುಂದದಲ್ಲಿ ಜುಲೈ 21ರ ಘಟನೆಗೆ ಸಂಬಂಧಿಸಿ ಅಧಿಕಾರಿಗಳದೇ ತಪ್ಪಿರುವುದೆಂದು ಅಭಿಪ್ರಾಯಪಟ್ಟಿರುವುದೆಂದು ಅನಧಿಕೃತವಾಗಿ ಗೊತ್ತಾಗಿದೆ ಎಂದು ಹೇಳಿದರು. ಚಿಕ್ಕನರಗುಂದದಲ್ಲಿ ಅಂದು ಬಲವಾದ ಪೋಲೀಸ್ ಪಡೆ ಮುಂಜಾನೆಯಿಂದ ರಾತ್ರಿವರೆಗೆ ಪರೇಡ್ ಮಾಡುತ್ತಿದ್ದುದನ್ನು ಸಭೆಯಲ್ಲಿ ತೀವ್ರವಾಗಿ ಪ್ರತಿಭಟಿಸಿ ಮಾತನಾಡಿ ಹುತಾತ್ಮ ದಿನದಂದು ಅನವಶ್ಯಕ ಪೋಲೀಸ್ ಪಡೆ ಕಳಿಸಿ ರೈತರಲ್ಲಿ ಭಯಭೀತಿ ಹುಟ್ಟಿಸುವ ತಂತ್ರ ನಡೆಸಲಾಗಿದೆ ಎಂದು ಆಪಾದಿಸಿದರು".

ಸಭೆಯಲ್ಲಿ ಮಲಪ್ರಭಾ ರೈತಸಮಿತಿಯ ಇನ್ನಿತರ ಸಂಚಾಲಕರಾದ ಶ್ರೀ ಬಿ. ಬಿ. ಗಾಣಿಗೇರ ಮತ್ತು ಶ್ರೀ ಎಸ್. ಎ. ಪಾಟೀಲ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಕಾಂ. ಸ್ವಾಮಿನಿತ್ಯಾನಂದರು "ರೈತರು ನಿರಂತರ ಹೋರಾಟ ನಡೆಸಲು ಕರೆಕೊಟ್ಟರು. ರೈತಹೋರಾಟವು ರಾಜಕೀಯ ಹೋರಾಟವೇ ಎಂದು ಬೇಳಿದ ಅವರು ರೈತವಿರೋಧಿ ಸರಕಾರವನ್ನು ಸೋಲಿಸಿ ರೈತ–ಕಾರ್ಮಿಕರ ಸರಕಾರವನ್ನು ಸ್ಥಾಪಿಸಲು ಹೋರಾಡುವಂತೆ ವೀರ ಪ್ರತಿಜ್ಞೆ ಮಾಡಬೇಕೆಂದು ಹೇಳಿದರು".

●

ಯೂನಿಯನ್‌ನ ವಾರ್ಷಿಕೋತ್ಸವ

ಬೆಂಗಳೂರಿನ ವೈಟ್‌ಫೀಲ್ಡ್ ರಸ್ತೆಯಲ್ಲಿರುವ ಆಲ್‌ಫ್ರೆಡ್ ಹರ್ಬರ್ಟ್ (ಇಂಡಿಯಾ) ಕಾರ್ಮಿಕಸಂಘದ ಎರಡನೆಯ ವಾರ್ಷಿಕೋತ್ಸವ 5-7-81ರಂದು ಹೋಟೆಲ್ ಅಜಂತದಲ್ಲಿ ನಡೆಯಿತು. ಸಂಘದ ಸಾಧನೆ ಮತ್ತು ಚಟುವಟಿಕೆ ಕುರಿತು ಪ್ರಧಾನಕಾರ್ಯದರ್ಶಿಯವರು ಮಂಡಿಸಿದ ವರದಿ ಅಂಗೀಕಾರವಾಯಿತು.

ಮುಖ್ಯ ಅತಿಥಿಗಳಾಗಿ ಎಲ್ಲೈಸಿಯ ಕಾಂ. ಶ್ರೀನಿವಾಸ್, ಐ.ಟಿ.ಐ.ನಿಂದ ಕಾಂ. ಕೃಷ್ಣಕುಮಾರ ಆಗಮಿಸಿದ್ದರು. ಇಂಡಿಯಾ ಟಿನ್ ಇಂಡಸ್ಟ್ರೀಸ್, ಜಿ. ಆರ್. ಸ್ಟೀಲ್ಸ್, ಶಿವಮೊನಿ ಟ್ಯೂಬ್ಸ್, ದೂರವಾಣಿ ಕೇಬಲ್ಸ್, ಬೆಂಗಳೂರು ಈಸ್ಟ್ ಇಂಡಸ್ಟ್ರೀಯಲ್ ಎಂಪ್ಲಾಯೀಸ್ ಅಸೋಸಿಯೇಷನ್ ಮುಂತಾದ ಕಾರ್ಮಿಕ ಸಂಘದ ಪ್ರತಿನಿಧಿಗಳು ಆಗಮಿಸಿದ್ದರು.

ಕೊನೆಯಲ್ಲಿ ಸಂಘದ ಪದಾಧಿಕಾರಿಗಳ ಚುನಾವಣೆ ನಡೆಸಲಾಯಿತು. ಕಾಂ. ಸೂರ್ಯನಾರಾಯಣರಾವ್ ಅಧ್ಯಕ್ಷರಾಗಿ, ಕಾಂ. ಸಿ. ಕುಂಜಪ್ಪನ್ ಪ್ರಧಾನಕಾರ್ಯದರ್ಶಿಗಳಾಗಿ, ಕಾಂ. ಎಲ್. ಬಿ. ಶೃಂಗೇಶ್ವರ ಉಪಾಧ್ಯಕ್ಷರಾಗಿ, ಕಾಂ. ಸುರೇಶ್ ರಾಯಕಾರ್ ಖಜಾಂಚಿಯಾಗಿ ಮತ್ತು ಕಾಂ. ರಿಚರ್ಡ್ ಡಿಸಿಲ್ವ ಅವರು ಸಹಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಚುನಾಯಿತರಾದರು. ಚುನಾವಣೆಯನ್ನು ಕಾಂ. ಜಾನ್ ವಿನ್ಸೆಂಟ್ ಸುಗಮವಾಗಿ ನಡೆಸಿಕೊಟ್ಟರು.

ಸಭೆಯಲ್ಲಿ ಸಂಘವನ್ನು ಸಿ. ಐ. ಟಿ. ಯುಗೆ ಸೇರ್ಪಡೆ ಮಾಡಬೇಕೆನ್ನುವ ನಿರ್ಣಯ ತೆಗೆದುಕೊಳ್ಳಲಾಯಿತು.

ಕಾರ್ಯಕ್ರಮದ ಅಂಗವಾಗಿ ಪ್ರಗತಿಪರ ಕಲಾವಿದ ಜಾನ್‌ದೇವರಾಜ್ ಅವರ ಚಿತ್ರಗಳನ್ನು ಪ್ರದರ್ಶಿಸಲಾಯಿತು. ಅಲ್ಲದೇ ಬೆಂಗಳೂರು ಸಮುದಾಯ ತಂಡದವರಿಂದ 'ಬೆಲ್ಚಿ' ನಾಟಕ ಪ್ರದರ್ಶನವೇರ್ಪಡಿಸಿತ್ತು.

●

ಆಂಧ್ರದ ಮಾರ್ಕ್ಸಿಸ್ಟ್ ನಾಯಕನ ಕೊಲೆ

ಜುಲೈ 19, 1981 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಮುಖ ನಾಯಕರಾದ ಪೆರುಮಲ್ಲ ಜಗನ್ನಾಥಂ ಅವರು ವಾರಂಗಲ್ ಜಿಲ್ಲೆಯ ಗರ್ದುರು ಎಂಬ ಹಳ್ಳಿಯಲ್ಲಿ ನಿನ್ನೆ ಕೊಲೆಗೆ ಈಡಾಗಿದ್ದಾರೆಂದು ವಿಧಾನ ಸಭೆಯಲ್ಲಿ ಪಕ್ಷದ ಉಪನಾಯಕರಾದ ಎ. ಓಂಕಾರ್ ಅವರು ಹೇಳಿದರು.

ನಕ್ಸಲೀಯರಿಂದ ಮತ್ತು ಕಾಂಗ್ರೆ ಕಾರ್ಯಕರ್ತರಿಂದ ತಮಗೆ ಗಂಡಾಂತರವಿದೆ ಎಂದು ಪೆರುಮಲ್ಲರು ಹೆದರಿ ಅದಕ್ಕಾಗಿ ಸಾಕಷ್ಟು ರಕ್ಷಣೆ ಒದಗಿಸಲು ಸಂಬಂಧಪಟ್ಟವರಿಗೆ ಮನವಿ ಮಾಡಿಕೊಂಡಿದ್ದಾರೆಂದು ಓಂಕಾರ್ ಅವರು ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

○

ರಾಯರ ಧರ್ಮದರ್ಶನ

ರಾಜ್ಯದ ಸಂಕಷ್ಟದಲ್ಲಿರುವ ಬಡಜನತೆಯ ಕಷ್ಟ ಪರಿಹಾರಕ್ಕಾಗಿ ನಮ್ಮ ಮುಖ್ಯಮಂತ್ರಿಯವರು ಸ್ವತಃ ಅಹವಾಲನ್ನು ಆಲಿಸಲು ಧರ್ಮದರ್ಶನ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈ ಧರ್ಮದರ್ಶನಕ್ಕೆ ಹೋಗಿಬಂದ ಒಬ್ಬ ಬಡಪಾಯಿ ತಮ್ಮ (ಕಹಿ) ಅನುಭವವನ್ನು ಐಕ್ಯರಂಗಕ್ಕೆ ಬರೆದಿದ್ದಾರೆ. ಈ ರೀತಿ ಇದೆ :

"ನಾನು ನನ್ನ ಮಾನಸಿಕ ಅಸ್ವಸ್ಥ ಸೋದರನ ವರ್ಗಾವಣೆಗಾಗಿ ದೊರೆಗೆ ಅಹವಾಲು ಸಲ್ಲಿಸಲು ಅಧಿಕಾರಿಗಳಲ್ಲಿ ಅಪಾಯಿಂಟ್‌ಮೆಂಟ್ ಕೇಳಿದೆ. ಇದಕ್ಕೆಲ್ಲ ಅಪಾಯಿಂಟ್‌ಮೆಂಟ್ ಅವಶ್ಯಕತೆಯಿಲ್ಲ. ಸ್ವತಃ ರಾಯರೇ ಪ್ರತಿ ಸೋಮವಾರ ಮತ್ತು ಶುಕ್ರವಾರ ಧರ್ಮದರ್ಶನವಿಟ್ಟುಕೊಂಡಿದ್ದಾರೆ. ಅಲ್ಲಿಯೇ ಕಾಣಬಹುದು ಎಂದು ಹೇಳಿದರು.

ನಾನು ಖುಷಿಯಿಂದ ಸೋಮವಾರ ಬೆಳಿಗ್ಗೆ ಶುಚಿರ್ಭೂತನಾಗಿ ರಾಯರನ್ನು ಕಾಣಲು ಹೋದೆ. ಬೆಳಗಿನ 7 ಘಂಟೆ ಸಮಯಕ್ಕೆಲ್ಲ ಸುಮಾರು 300 ಜನ ರಾಯರ ದರ್ಶನಕ್ಕೆ ಕಾಯ್ದಿದ್ದರು. 9 ಘಂಟೆಯಾದರೂ ರಾಯರು ಬರಲೇ ಇಲ್ಲ. 9-15ರ ಸಮಯಕ್ಕೆ ರಾಯರ ಸವಾರಿ ಆಗಮಿಸಿತು. ಅಲ್ಲಲ್ಲಿ ಇದ್ದ ಪೋಲೀಸ್ ಅಧಿಕಾರಿಗಳು ನೆರೆದಿದ್ದ ಜನರನ್ನು ತಮ್ಮ ಲಾಠೀಗಳಿಂದ ದೂರ (ಕಾಂಪೌಂಡ್ ಹೊರಗೆ) ಚದುರಿಸಿದರು. ರಾಯರೊಟ್ಟಿಗೇ ಕಾರಿನಿಂದ ಕನ್ನಡಿಗರ ಏಕೈಕ ಮಹಾನಾಯಕ, ಛಲದಂಕಮಲ್ಲ ವಾಟಾಳ್ ನಾಗರಾಜರೂ ಬಂದರು. ಪೋಲೀಸ್ ಅಧಿಕಾರಿಗಳು ಸೆಟೆದು ನಿಂತು ರಾಯರಿಗೆ ಮತ್ತು ವಾಟಾಳರಿಗೆ ಸೆಲ್ಯೂಟ್ ಹೊಡೆದರು.

ರಾಯರು ತಮ್ಮ ಕಾರ್ಯಾಲಯ ಹೊಕ್ಕೊಡನೆ ಮೊದಲು ಖಾದಿಧಾರಿಗಳನ್ನು ಒಳಗೆ ಕರೆಯಲಾಯಿತು. ಅವರೊಡನೆ ಮಾತುಕತೆ ನಡೆಸಿದ ರಾಯರು ಜನರನ್ನು ಒಳಗೆ ಬಿಡಲು ಆದೇಶ ನೀಡಿದರು. ಸರದಿಯಲ್ಲಿ ಒಬ್ಬೊಬ್ಬರನ್ನೇ ಒಳಗೆ ಬಿಡಲಾಯಿತು. ನನ್ನ ಸರದಿಯೂ ಬಂದಿತು. ರಾಯರ ಧರ್ಮದರ್ಶನ ಭವನ ಭವ್ಯವಾಗಿದೆ, ಸುಂದರವಾಗಿದೆ. ಟೇಬಲ್ ಎದುರು ವಿದೇಶಿ ಸಿಗರೇಟೊಂದನ್ನು ಕಚ್ಚಿಕೊಂಡು ಧಡೂತಿ ಆಸಾಮಿ ಕುಳಿತಿತ್ತು. ಇಲ್ಲಿಯವರೆಗೆ ಪೇಪರ್‌ನಲ್ಲಿ ಮಾತ್ರ ರಾಯರ ಮುಖನೋಡಿದ್ದ ನನಗೆ ರಾಯರ ದೇಹಾಕೃತಿ ನೋಡಿದ ಮೇಲೆ ಈ ಭವ್ಯ ಭುಜಗಳ ಮೇಲೆ ರಾಜ್ಯದ ಜನತೆಯ ಭವಿಷ್ಯ ದೃಢವಾಗಿ ನಿಂತಿದೆಯೆನಿಸಿತು. ರಾಯರ ಪಕ್ಕದಲ್ಲೇ ಚಮಚಾ ವಾಟಾಳರೂ ಆಸೀನರಾಗಿದ್ದರು.

ನನ್ನ ಅಹವಾಲನ್ನು ರಾಯರ ಕೈಗೇ ಕೊಡಬೇಕೆನ್ನುವಷ್ಟರಲ್ಲಿ ಅಲ್ಲಿದ್ದ ವ್ಯಕ್ತಿಯೊಬ್ಬ ನನ್ನ ಅರ್ಜಿಯನ್ನು ಕಸಿದುಕೊಂಡು ನಡೆಯಿರಿ ! ನಡೆಯಿರಿ ! ಎಂದೆನ್ನುತ್ತ ತಳ್ಳಿಯೇಬಿಟ್ಟ. ರಾಯರೊಟ್ಟಿಗೇ ಕಷ್ಟ ಹೇಳಿಕೊಳ್ಳಬೇಕೆಂದಿದ್ದ ನಾನು ಆತಂಕದಿಂದ ರಾಯರನ್ನು ನೋಡುತ್ತಿದ್ದಾಗ ರಾಯರು ಮುಗುಳ್ನಗುತ್ತಿದ್ದರು.

ಒಂದು ಘಂಟೆಯಲ್ಲಿ ನೂರಾರು ಜನರ ಕಷ್ಟಸುಖ ವಿಚಾರಿಸಿಕೊಳ್ಳುವ ಧರ್ಮದರ್ಶನದ ಗುಟ್ಟುಗೊತ್ತಾಗಿ ನಿರಾಶನಾದೆ. [ನಿಟ್ಟುಸಿರು ಬಿಟ್ಟು ಹೊರಗೆ ಬಂದಾಗ ಅಲ್ಲಿದ್ದ ವ್ಯಕ್ತಿಯೊಬ್ಬ ಹೇಳಿದ "ನೀವು ಮೂರ್ಖರಪ್ಪೇ! ಇದೆಲ್ಲ ನಾಟಕ ! ಅರ್ಜಿಗಳಿಗೆಲ್ಲ ಕಸದ ಬುಟ್ಟಿಯೇ ಗತಿ" ಎಂದರು.]

ತಿರುಪತಿ ತಿಮ್ಮಪ್ಪನ ಒಂದು ಕ್ಷಣದ ಧರ್ಮದರ್ಶನ ಪಡೆದು ಹಣದೊಟ್ಟಿಗೆ ತಲೆಬೋಳಿಸಿಕೊಂಡು ಇಂಗು ತಿಂದ ಮಂಗನಂತೆ ಮುಖಮಾಡಿಕೊಂಡು ಬರುವವರನ್ನು ಕಂಡಿದ್ದೆ. ನನ್ನ ಪಾಡೂ ಅದೇ ಆಗಿತ್ತು !"

ವಿದ್ಯಾರ್ಥಿ ಚಳುವಳಿ

ಸರ್ವರಿಗೂ ವಿದ್ಯಾಭ್ಯಾಸ ಮತ್ತು ಸರ್ವರಿಗೂ ಉದ್ಯೋಗವನ್ನು ನೀಡುವುದಕ್ಕಾಗಿ ಸರಕಾರವನ್ನು ಒತ್ತಾಯಿಸಲು ಎಸ್. ಎಫ್. ಐ.ನ ಕೇಂದ್ರ ಸಮಿತಿ ಮತ್ತು ಡಿ. ವೈ. ಎಫ್. ಐ. ಜಂಟಿಯಾಗಿ ಜುಲೈ 15ರಿಂದ ದೇಶದಾದ್ಯಂತ ಚಳುವಳಿಗಳನ್ನು ನಡೆಸುತ್ತಿವೆ.

ಈ ಚಳುವಳಿಯ ಅಂಗವಾಗಿ ದ. ಕ. ಜಿಲ್ಲೆಯಲ್ಲಿ ಹತ್ತುಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳಿಂದ ಸಹಿಗಳನ್ನು ಸಂಗ್ರಹಿಸಲು ಜಿಲ್ಲಾಸಮಿತಿ ನಿರ್ಧರಿಸಿದೆ. ಆಗಸ್ಟ್ 20ರಂದು ಮಂಗಳೂರಿನಲ್ಲಿ ವಿದ್ಯಾರ್ಥಿ ಯುವಜನರಬೃಹತ್ ಮತಪ್ರದರ್ಶನ ಏರ್ಪಡಿಸಲಾಗಿದೆ.

○

ಜನಜೀವನ ಸುಧಾರಣೆ ಒಂದು ಪಕ್ಷದಿಂದ ಸಾಧ್ಯವಿಲ್ಲ

(1ನೇ ಪುಟದಿಂದ)

ರಾಜಧಾನಿ ದಿಲ್ಲಿಯಲ್ಲಿ ರೈತರ ಮಹಾ ಮೇಳವೊಂದು ಜರುಗಿದ್ದು-ಇದು ಒಳ್ಳೆಯ ಹೋರಾಟದ ಒಂದು ಆರಂಭ ಘಟ್ಟ ಎಂದ ಇ. ಎಂ. ಎಸ್. ಅವರು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಈ ರ್‍ಯಾಲಿಯನ್ನು ಸಂಘಟಿಸುವಲ್ಲಿ ತಮ್ಮ ಪಕ್ಷವೇ ಪ್ರಧಾನಪಾತ್ರ ವಹಿಸಿತ್ತೆಂದು ಹೆಮ್ಮೆಯಿಂದ ನುಡಿದರು.

ಕಾರ್ಮಿಕರ ಸಮಾವೇಶ

ಕಳೆದ ಜೂನ್ 4ರಂದು ಮುಂಬೈ ನಗರದಲ್ಲಿ ಸಮಾವೇಶಗೊಂಡಿದ್ದ ಕೇಂದ್ರ ಕಾರ್ಮಿಕಸಂಘಟನೆಗಳ ಸಮಾವೇಶವು ಅತ್ಯಂತ ಮಹತ್ವದ್ದೆಂದು ವರ್ಣಿಸಿದ ಇ. ಎಂ. ಎಸ್. ಅವರು, ಈ ಸಮಾವೇಶವು ಮೂಲಭೂತ ರಾಜಕೀಯ ಪ್ರಶ್ನೆಗಳನ್ನು ಕೇಳುವಂತಹ ಸಮಾವೇಶವಾಗಿದ್ದು, ಟ್ರೇಡ್ ಯೂನಿಯನ್ ಚಳುವಳಿಯು ಬೇರೆ ದಿಕ್ಕನ್ನು ಹಿಡಿಯಲು ಸಹಾಯಕವಾಗಿದೆ ಎಂದು ನುಡಿದರು.

ದುಡಿಯುವ ಜನಸಮೂಹದ ಎರಡು ಮುಖ್ಯ ವಿಭಾಗಗಳಾದ ರೈತರು ಮತ್ತು ಕಾರ್ಮಿಕರು ಪ್ರಸಕ್ತ ಕಾಂಗ್ರೆಸ್ ಸರ್ಕಾರ ಹಾಗೂ ಜಮೀನ್ದಾರಿ ಬಂಡವಾಳಶಾಹಿ ವ್ಯವಸ್ಥೆಯ ಮೇಲೆ ತಮ್ಮ ಅಸಮಾಧಾನ ತೋರಿಸುತ್ತಿರುವುದು ಅವರು ಚಳುವಳಿ ಮತ್ತು ಹೋರಾಟದ ಹಾದಿ ಹಿಡಿದಿರುವುದರಿಂದ ಸ್ಪಷ್ಟವಾಗುತ್ತಿದೆ ಎಂದು ನುಡಿದ ಸಿ. ಪಿ. ಐ. (ಎಂ) ಕಾರ್ಯದರ್ಶಿಗಳು; ಲೋಕಸಭೆಯಲ್ಲಿ ಎಲ್ಲ ವಿರೋಧ ಪಕ್ಷಗಳೂ ಒಂದಾಗಿ ಇಂದಿರಾ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಿರುವುದರತ್ತ ಸಭಿಕರ ಗಮನ ಸೆಳೆದರು.

ಸಂಯುಕ್ತರಂಗ

ಯಾವುದೇ ಪರಿಸ್ಥಿತಿ ಬಂದರೂ ಶ್ರೀಮಂತರ ಪರವಾದ ಬಲಪಂಥೀಯ ಪಕ್ಷಗಳಾದ ಭಾರತೀಯ ಜನತಾ ಪಕ್ಷದಂತಹ ಪಕ್ಷಗಳೊಡನೆ ಸೇರಿಕೊಂಡು ಸಂಯುಕ್ತರಂಗ ಮತ್ತು ಸರ್ಕಾರವನ್ನು ರಚಿಸಲು ತಮ್ಮ ಪಕ್ಷವು ಸಿದ್ಧವಿಲ್ಲ ಎಂದು ಘೋಷಿಸಿದ ಕಾಂ. ಇ. ಎಂ. ಎಸ್. ಅವರು, ಈ ಬಲಪಂಥೀಯ ಪಕ್ಷಗಳು ಇಂದಿರಾ ಸರ್ವಾಧಿಕಾರದ ವಿರುದ್ಧ ಹೋರಾಟಕ್ಕೆ ನಿಂತರೆ ಅದಕ್ಕೆ ತಮ್ಮ ಪಕ್ಷ ಸಕ್ರಿಯ ಬೆಂಬಲ ಕೊಡುವುದಾಗಿ ಹೇಳಿದರು.

ಕಾಂಗ್ರೆಸ್ (ಐ), ಒಂದುಕಡೆ, ಎಡ ಪಕ್ಷಗಳಾದ ಸಿ. ಪಿ. ಐ. (ಎಂ), ಸಿ. ಪಿ. ಐ., ಆರ್. ಎಸ್. ಪಿ. ಫಾರ್ವರ್ಡ್‌ಬ್ಲಾಕ್ ಮತ್ತೊಂದು ಕಡೆ ಹಾಗೂ ಬಲಪಂಥೀಯ ಪಕ್ಷಗಳಾದ ಬಿ. ಜೆ. ಪಿ., ಜನತಾ ಹಾಗೂ ಲೋಕದಳ ಮಗದೊಂದು ಕಡೆ ಕ್ರಮವಾಗಿ ನಿಂತಿದ್ದು ಒಂದು ರೀತಿಯ ರಾಜಕೀಯ ಶಕ್ತಿಗಳ ಧ್ರುವೀಕರಣವಾಗಿದೆ ಎಂದು ಇ. ಎಂ. ಎಸ್. ವಿಶ್ಲೇಶಿಸಿದರು.

ತಮ್ಮ ಪಕ್ಷದ ಮೂವರು ಮುಖ್ಯಮಂತ್ರಿಗಳ ಸ್ಥಾನದಲ್ಲಿದ್ದರೂ ನಾವು ಇಂದಿರಾ ಕಾಂಗ್ರೆಸ್ಸಿಗೆ ಪರ್ಯಾಯ ಶಕ್ತಿ ಎಂದು ಹೇಳಿಕೊಳ್ಳುವುದಿಲ್ಲ- ದೊಡ್ಡ ದೇಶವೊಂದರಲ್ಲಿ ತಮ್ಮ ಪಕ್ಷವು ಇನ್ನೂ ಚಿಕ್ಕ ಪಕ್ಷವಾಗಿದೆ ಎಂದು ಸಿ. ಪಿ. ಐ. (ಎಂ) ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ಒಪ್ಪಿಕೊಂಡರು.

ಆದರೆ ಯಾವ ಒಂದು ರಾಜ್ಯದಲ್ಲಿ ಓರ್ವ ಮುಖ್ಯಮಂತ್ರಿಯನ್ನೂ ಹೊಂದಿರದ ಬಿ. ಜೆ. ಪಿ., ಜನತಾ ಮತ್ತು ಲೋಕದಳ ಪಕ್ಷಗಳು, ಇಂದಿರಾ ಕಾಂಗ್ರೆಸ್ಸಿಗೆ ತಾವೇ ಪರ್ಯಾಯ ಪಕ್ಷ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿರುವ ನಾಯಕಮಣಿಗಳನ್ನು ಗೇಲಿ ಮಾಡಿದರು.

ಸ್ವಾತಂತ್ರ್ಯಾನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಹಾಗೂ ಜನತಾ ಪಕ್ಷದ ಸರ್ಕಾರಗಳು ದೇಶದ ಜನತೆಗೆ ಬಡತನ ತಂದದ್ದೂ ಅಲ್ಲದೆ ಅವರ ಎಲ್ಲಾ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಕೊಡಲಿಏಟು ಹಾಕುತ್ತಿರುವ ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರ ಹಾಗೂ ಜಮೀನ್ದಾರಿ - ಬಂಡವಾಳಶಾಹಿ ವ್ಯವಸ್ಥೆಯು ಜನತೆಯ ಜೀವಕ್ಕೇ ಗಂಡಾಂತರ ಉಂಟುಮಾಡುವಂತಹ ಮಟ್ಟಕ್ಕೆ ತಲುಪುತ್ತಿದ್ದು, ಇದರಿಂದ ಈ ನಾಡ ಜನರನ್ನು ರಕ್ಷಿಸಿ ಹೊಸ ಭಾರತ ಕಟ್ಟಲು ಎಲ್ಲ ಎಡ ಪಕ್ಷಗಳು, ಪ್ರಜಾಸತ್ತೆಯಲ್ಲಿ ನಂಬಿಕೆಯಿರುವ ಶಕ್ತಿಗಳು, ವ್ಯಕ್ತಿಗಳು, ಸಂಘಸಂಸ್ಥೆಗಳು ಒಂದು ವಿಶಾಲ ವೇದಿಕೆಯಡಿ ಒಂದಾಗಿ ಕಾರ್ಯೋನ್ಮುಖವಾಗಬೇಕು–ಇದಕ್ಕೆ ದಯಮಾಡಿ ಬನ್ನಿ ಎಂಬ ಕಳಕಳಿಯ ಆಹ್ವಾನವನ್ನು ಕೊಟ್ಟು ಇ. ಎಂ. ಎಸ್. ತಮ್ಮ ಭಾಷಣ ಮುಗಿಸಿದರು.

ವರದಿ : ಶಂಕರಲಾಳಾಪುರ

ರಾಷ್ಟ್ರಪತಿಯವರ ಸುಗ್ರೀವಾಜ್ಞೆ

(1ನೇ ಪುಟದಿಂದ)

ಜನತಂತ್ರದಲ್ಲಿ ನಂಬಿಕೆ ಇರುವವರೆಲ್ಲರೂ ಈ ಕರಾಳಶಾಸನದ ವಿರುದ್ಧ ಹೋರಾಡಬೇಕು ಎಂದಿದ್ದಾರೆ.

ಈ ಸುಗ್ರೀವಾಜ್ಞೆಯನ್ನು ದೇಶದ ಎಲ್ಲ ಕಾರ್ಮಿಕ ಸಂಘಟನೆಗಳೂ, ಸಂಘಸಂಸ್ಥೆಗಳೂ, ವಿರೋಧಿ ಪಕ್ಷಗಳೂ, ಜನತಂತ್ರ ಪ್ರೇಮಿಗಳೂ ಉಗ್ರವಾಗಿ ಪ್ರತಿಭಟಿಸಿದ್ದಾರೆ. ಹೋರಾಟಕ್ಕೆ ಸಿದ್ಧರಾಗುವಂತೆ ಕರೆಕೊಟ್ಟಿದ್ದಾರೆ.

ಈ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಸಂಸತ್ತಿನ ಆರಂಭದ ದಿನವಾದ ಆಗಸ್ಟ್ 17ರಂದು 'ಕರಾಳದಿನ' ಆಚರಿಸಲು ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆಕೊಟ್ಟಿವೆ. ಇಂಟಕ್ (ಕಾಂಗ್ರೆಸ್) ಮಾತ್ರ ಸುಗ್ರೀವಾಜ್ಞೆಯನ್ನು ಸ್ವಾಗತಿಸಿದೆ.

ಸಿ.ಐ.ಟಿ.ಯು.ವಿನ ರಾಜ್ಯಸಮಿತಿಯ ಪ್ರಧಾನಕಾರ್ಯದರ್ಶಿ ಕಾಂ. ನಂಜುಂಡಪ್ಪನವರು ಸುಗ್ರೀವಾಜ್ಞೆಯನ್ನು ಖಂಡಿಸುವ ಹೇಳಿಕೆಯೊಂದನ್ನು ಹೊರಡಿಸಿ ಆಗಸ್ಟ್ 7ರಂದು, ಸಿ.ಐ.ಟಿ.ಯು. ನೇತೃತ್ವದಲ್ಲಿರುವ ಕಾರ್ಮಿಕ ಸಂಘಗಳು ರಾಜ್ಯದಾದ್ಯಂತ ಮಹಪ್ರದರ್ಶನ, ಪ್ರತಿಭಟನಾ ಸಭೆಗಳನ್ನು ಏರ್ಪಡಿಸಬೇಕೆಂದು ಕರೆಕೊಟ್ಟಿದ್ದಾರೆ.

ಚಿಂತಾಮಣಿ ಯಶಸ್ವೀ ಬಂದ್

17-7-81ರಂದು ವಿರೋಧಿ ಪಕ್ಷಗಳ ಆಶ್ರಯದಲ್ಲಿ ಚಿಂತಾಮಣಿಯಲ್ಲಿ ಯಶಸ್ವೀ ಬಂದ್ ಆಚರಿಸಲಾಯಿತು. ಯಾವದೇ ಅಹಿತಕರ ಘಟನೆ ನಡೆಯದೆ ಬಂದ್ ಶಾಂತರೀತಿಯಿಂದ ನಡೆಯಿತು.

ಅಂದು ಸಂಜೆ ಆಜಾದ್ ಚೌಕ್‌ನಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಬಿ. ಜೆ. ಪಿ.ಯ ಶ್ರೀ ಲಕ್ಷ್ಮಣರಾವ್ ವಹಿಸಿದ್ದರು. ಕಾಂ. ಲಕ್ಷ್ಮಣರೆಡ್ಡಿ ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ. ಮುಗುಮಾಳಪ್ಪ, ಎಸ್. ಎಫ್. ಐ.ನ ಕಾಂ. ಆರಾಧ್ಯ ಹಾಗೂ ಬಿ.ಜೆ.ಪಿ.ಯ ನಾಯಕ ಎ. ಕೆ. ಸುಬ್ಬಯ್ಯ ಮಾತನಾಡಿ ಸರಕಾರದ ಜನವಿರೋಧಿ ಧೋರಣೆಗಳನ್ನು ಖಂಡಿಸಿದರು. ಇಬ್ರಾಹಿಂರ ರಾಜೀನಾಮೆಗೆ ಒತ್ತಾಯಿಸಿದರು.

ಂ

ಸಂಪಾದಕೀಯ

(1ನೇ ಪುಟದಿಂದ)

ಆದರೆ ಹಣದುಬ್ಬರವನ್ನು ತಡೆಯುವ ನೆಪದಲ್ಲಿ ಶ್ರಮಜೀವಿಗಳು ಹೆಚ್ಚಿಗೆ ಕೇಳದಂತೆ ತಡೆಯುವುದು ಮತ್ತು ಆರ್ಥಿಕ ಬಿಕ್ಕಟ್ಟಿನ ಭಾರವನ್ನು ಅವರ ಮೇಲೆ ಹೇರುವುದು ಬಂಡವಾಳಶಾಹಿ ವ್ಯವಸ್ಥೆಯು ಪೋಷಕರು ತೆಗೆದುಕೊಳ್ಳುವ ಕ್ರಮವಾಗಿದೆ. ಈಗ ಕೇಂದ್ರಸರಕಾರವು ಸುಗ್ರೀವಾಜ್ಞೆಯ ಮೂಲಕ ಪಡೆದಿರುವ ಅಮಿತ ಅಧಿಕಾರದ ಉದ್ದೇಶವೂ ಇದೇ ಆಗಿದೆ. ಹಿಂದೆ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಮಾಡಿದ ಪ್ರಯೋಗ ಇದೀಗ ಮತ್ತೆ ಜಾರಿಗೆ ಬರುತ್ತಲಿದೆ. ಇದು ಕೇವಲ ಕಾರ್ಮಿಕಸಂಘಟನೆಗಳ ಮೇಲಿನ ಧಾಳಿ ಮಾತ್ರವೇ ಅಲ್ಲ, ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನಡೆದಿರುವ ನಗ್ನ ಆಕ್ರಮಣ. ಈ ಧಾಳಿಯನ್ನು ಹಿಮ್ಮೆಟ್ಟಿಸುವುದು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳ ಆದ್ಯಕರ್ತವ್ಯ.

ಂ

ಬೀಡಿ ಮಜೂರರ ಸಭೆ

ಮಂಗಳೂರು ತಾಲೂಕಿನ ಜಪ್ಪಿನಮೊಗ್ರು ಗ್ರಾಮದ ಬೀಡಿ ಮಜೂರರ ಸಭೆಯು ಅಳಪೆ ಪ್ರದೇಶ ಬೀಡಿ ಯೂನಿಯನ್‌ನ ಅಧ್ಯಕ್ಷರಾದ ಕೆ.ಪಿ. ಸಾಲ್ಯಾನ್‌ರವರ ಅಧ್ಯಕ್ಷತೆಯಲ್ಲಿ 19-7-81ರಂದು ನಡೆಯಿತು.

ಪ್ರಾರಂಭದಲ್ಲಿ ಸಂಘದ ಉಪಾಧ್ಯಕ್ಷರಾದ ಜೆ. ಸದಾಶಿವ ಕಾರ್ಪೆಂಟರವರು ಸ್ವಾಗತಿಸಿದರು. ಸಭೆಯಲ್ಲಿ ಯೂನಿಯನ್‌ನ ಕಾರ್ಯದರ್ಶಿ ಜೆ. ಬಾಲಕೃಷ್ಣಶೆಟ್ಟಿಯವರು ಸಂಘದ ಚಟುವಟಿಕೆಗಳ ಬಗ್ಗೆ ಮಾತನಾಡಿದರು. ಜಿಲ್ಲಾ ಸಿ.ಐ.ಟಿ.ಯು.ವಿನ ಜೊತೆ ಕಾರ್ಯದರ್ಶಿಯಾದ ಯು. ಬಿ. ಲೋಕಯ್ಯನವರು ದೇಶದ ರಾಜಕೀಯ ಪರಿಸ್ಥಿತಿಯ ಬಗ್ಗೆ ಮಾತನಾಡಿ ಬೀಡಿ ಮಜೂರರು ತಮ್ಮ ಹಕ್ಕುಗಳಿಗಾಗಿ ಹಾಗೂ ಈ ಸಮಾಜದ ಬದಲಾವಣೆಗಾಗಿ ಸಂಘಟಿತರಾಗಬೇಕೆಂದು ಕರೆ ನೀಡಿದರು.

ಸಭೆಯಲ್ಲಿ 15 ಜನರಿರುವ ಗ್ರಾಮ ಸಮಿತಿಯನ್ನು ರಚಿಸಿ, ಕಾರ್ಯದರ್ಶಿಯಾಗಿ ಜೆ. ಸಂಜೀವಕಲ್ಲತಡಮೆಯವರನ್ನು ಆರಿಸಲಾಯಿತು. ಕೊನೆಯಲ್ಲಿ ಜೆ. ಸಂಜೀವನವರು ಧನ್ಯವಾದವಿತ್ತರು.

●

ವಿಸ್ತೃತ ಸಭೆ

19-7-81ರಂದು ಮಂಗಳೂರು ತಾಲ್ಲೂಕಿನ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ವಿಸ್ತೃತ ಸಭೆಯು ಕಾಂ. ಕೆ. ಆರ್. ಶ್ರೀಯಾನ್‌ರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ಕಾಂ. ಕೆ. ಬಾಬು ದೇವಾಡಿಗರು ಸಂಘದ ಚಟುವಟಿಕೆ ಕುರಿತು ವಿವರಿಸಿದರು. ಬೀಡಿಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಕಾಂ. ಕಮಲಾಕ್ಷ ಬಂಗೇರ ಮತ್ತು ಸಿ. ನಾರಾಯಣ ಮೊದಲಾದವರು ಮಾತನಾಡಿದರು. ಂ

ಪರಿಹಾರ

ಬೆಂಗಳೂರಿನಲ್ಲಿರುವ ಮೈಸೂರು ಮಿಲ್‌ನಲ್ಲಿ 26-7-81ರಂದು ವೆಂಕಟಸ್ವಾಮಿ ಎಂಬ ಕಾರ್ಮಿಕ ಕೆಲಸದ ಮೇಲಿದ್ದಾಗ ಆಕಸ್ಮಾತ್ತಾಗಿ ನಿಧನ ಹೊಂದಿದರು.

ಸಿ. ಐ. ಟಿ. ಯು.ನ ನೇತೃತ್ವದಲ್ಲಿರುವ ಮೈಸೂರು ಮಿಲ್ ಹತ್ತಿಗಿರಣಿ ಕಾರ್ಮಿಕರ ಸಂಘ ಮೃತನ ಕುಟುಂಬಕ್ಕೆ ಯೋಗ್ಯ ಪರಿಹಾರವನ್ನು ನೀಡಲು ಆಡಳಿತವರ್ಗಕ್ಕೆ ಒತ್ತಾಯಿಸಿತು. ಒತ್ತಾಯಕ್ಕೆ ಮಣಿದು ಆಡಳಿತವರ್ಗ 10,000 ರೂ.ಗಳನ್ನು ಮೃತನ ಕುಟುಂಬಕ್ಕೆ ಪರಿಹಾರವಾಗಿ ನೀಡಿದೆ. ಂ

ಧರಣಿ ಸತ್ಯಾಗ್ರಹ

ಬಹಳಷ್ಟು ಜನ ಬಡವರು ಮತ್ತು ಮಧ್ಯಮ ವರ್ಗದ ಜನತೆ ಉಪಯೋಗಿಸುವ ಇಂಧನವಾದ ಸೌದೆ ವಿತರಣೆ ಶಿವಮೊಗ್ಗದಲ್ಲಿ ಅಸಮರ್ಪಕವಾಗಿದ್ದು, ಜನರು ಸೌದೆಗಾಗಿ ಪರದಾಡುತ್ತಿದ್ದಾರೆ.

ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಜಿಲ್ಲಾ ಘಟಕದ ನೇತೃತ್ವದಲ್ಲಿ ಸೌದೆಯ ಯೋಗ್ಯ ವಿತರಣೆಗೆ ಒತ್ತಾಯಿಸಿ 21-7-81ರಂದು ಜಿಲ್ಲಾ ಅರಣ್ಯಾಧಿಕಾರಿಗಳ ಕಾರ್ಯಾಲಯದ ಎದುರು ಒಂದು ದಿನದ ಸಾಂಕೇತಿಕ ಧರಣಿ ಸತ್ಯಾಗ್ರಹ ಆಚರಿಸಲಾಯಿತು. ಧರಣಿ ನೇತೃತ್ವವನ್ನು ಕಾಂ. ಆರ್. ಗೋಪಾಲ್‌ನಾಯರ್ ವಹಿಸಿದ್ದರು. ಧರಣಿ ಸತ್ಯಾಗ್ರಹದಲ್ಲಿ 25ಮಂದಿ ಯುವಜನರು ಭಾಗವಹಿಸಿದ್ದರು.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154